ಅಪರಂಜಿ



ಸಂಪುಟ—
ಸಂಚಿಕೆ—೧
ಸೆಪ್ಟಂಬರ್—೧೯೮

ನಗೆಯ ಕಾರಂಜಿ

ಈ ಸಂಚಿಕೆಯ ಲೇಖಕರು
ಅ. ಪ. ಹಾಸ್ಯಗಾರ್
ಸೋಮಿ
ಆನಂದ್
ಬಿ. ಎಸ್. ಚಂದ್ರಶೇಖರ್
ರಾಮಿ
ಕಪಟ ಕವಿ
ಕೇಫ
ಶ್ರೀ ಕೃ. ಕೊ
ರಮ್ಯ
ಜಿ. ಎನ್. ಜಿ. ದೀಕ್ಷಿತ್
ಚಿ. ರಾ. ಅಣ್ಣಾಜಿ
ಖುದ್ದೂಸ್.
ಮತ್ತು ಇತರರು.

ಗೌರವ ಸಲಹೆಗಾರರು ಅ. ರಾ. ಸೇ,
ಗೌ॥ ಸಂಪಾದಕರು ಆರ್. ಶೇಷಗಿರಿರಾವ್,

ಅ ಪ ರ ಂ ಜಿ

ಗೌರವ ಸಲಹೆಗಾರರು

ಶ್ರೀ ಅ.ರಾ.ಸೇ.
ಶ್ರೀ ಶಿವಕುಮಾರ್

ಪ್ರಕಾಶಕರು ಮತ್ತು ಸಂಪಾದಕರು

ಶ್ರೀ ಶೇಷಗಿರಿ

ವಾರ್ಷಿಕ ಚಂದಾ : ರೂ. 25-00

ಮುದ್ರಣ :
ಶ್ರೀ ವೆಂಕಟೇಶ್ವರ ಪವರ್ ಪ್ರಿಂಟರ್ಸ್, ಪ್ರೈವೇಟ್ ಲಿಮಿಟೆಡ್,
ಪೀಣ್ಯ, ಬೆಂಗಳೂರು-58.

ಮ ನ ವಿ

ಅಪರಂಜಿಗೆ ಒಂದು ವರ್ಷ ತುಂಬಿದೆ. ಎಲ್ಲಾ ಅಭಿಮಾನಿಗಳೂ ತಮ್ಮ ಚಂದಾ ಹಣವನ್ನು ಮನಿ ಆರ್ಡರ್ ಅಥವಾ ಡ್ರಾಫ್ಟ್ ಮೂಲಕ ಕೆಳಕಂಡ ವಿಳಾಸಕ್ಕೆ ಈ ಕೂಡಲೇ ಕಳಿಸಲು ಪ್ರಾರ್ಥನೆ. ಒಂದು ವರ್ಷದ ಸಾಧನೆಯ ಬಗೆಗೆ ನಿಮ್ಮ ಅನಿಸಿಕೆಗಳನ್ನು ನಿರ್ಭಯವಾಗಿತಿಳಿಸಿ, ಜಾಹಿರಾತು ಕೊಡಿ, ಹೊಸ ಚಂದಾದಾರರನ್ನು ಕೊಡಿ ಲೇಖಕರೂ, ವ್ಯಂಗ್ಯ ಚಿತ್ರಕಾರರೂ ತಮ್ಮ ಕೃತಿಗಳನ್ನು ಕಳಿಸಿಕೊಡಿ. ಅಪರಂಜಿ ನಿಮ್ಮದು. ನಿಮ್ಮ ಅಭಿಮಾನವೇ ಅದರ ಬಂಡವಾಳ.

ಅಪರಂಜಿ ಕಾರ್ಯಾಲಯ,
36, ಆರನೇ ಮುಖ್ಯ ರಸ್ತೆ,
ಮಲ್ಲೇಶ್ವರಂ,
ಬೆಂಗಳೂರು–560 003.

ಶೇಷಗಿರಿ.
ಸಂಪಾದಕ.

ಈ ಸಂಚಿಕೆಯಲ್ಲಿ

ಲೇಖನ	ಲೇಖಕ/ಲೇಖಕಿ	ಪುಟ
(ಕ್ರಿ) ಕೀಟಜ್ಞ ವಚನಗಳು	ಅ. ಪ. ಹಾಸ್ಯಗಾರ್	4
ಯಾರು ?	ಸೋಮಿ	4
ಅಪರಂಜಿ ಕಿಡಿ	ಆನಂದ್	5
ಇನ್ನಷ್ಟು ವಿಕ್ರಮಗಳು	ಬಿ. ಎಸ್. ಚಂದ್ರಶೇಖರ್	7
ಡಾ। ದಂಡಯ್ಯನ ಸತ್ಯನಾರಾಯಣ	ರಾಮಿ	11
ಕನ್ನಡ Vs ಇಂಗ್ಲೀಷ್	ಬಿ. ಎಸ್. ಚಂದ್ರಶೇಖರ್	13
ಪುಢಾರಿ–ಗೆ	ಕಪಟ ಕವಿ	16
ಮಾರ್ಕಂಡೇಯ ಕೈಲಾಸಂ ದೃಷ್ಟಿ	ಕೇಫ	17
ಕೀಟಗಳ ಬಗ್ಗೆ ಉಪನ್ಯಾಸ	ರಾಮಿ	19
ಜಾಹಿರಾತು	ಶ್ರೀ ಕೃ. ಕೊ.	23
ಯಾರಿಗೂ ಹೇಳೋಣು ಬ್ಯಾಡ	ಸೋಮಿ	25
ಮಂದಾರ	ರಮ್ಯ	27
ಪರ್ಸಪ್ಪ	ಜಿ. ಎನ್. ಜಿ. ದೀಕ್ಷಿತ್	36
	ಚಿ. ರಾ. ಅಣ್ಣಾಜಿ	39

ಅರ್ಜುನ, ನಿನ್ನ ಹೃದಯದಲ್ಲಿ ಅವಿವೇಕದಿಂದ ಹುದುಗಿ ಕೊಂಡಿರುವ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿಹಾಕಿ ಕರ್ಮಯೋಗವನ್ನು ಮಾಡು.

–ಶ್ರೀಕೃಷ್ಣ.

ಅಪರಂಜಿ ತನ್ನ ಬಾಲಾರಿಷ್ಟಗಳನ್ನು ಕಳೆದು ಕೊಂಡು ಒಂದುವರ್ಷಕಳೆದಿದ್ದಾಳೆ. ಹುಟ್ಟಿನಿಂದಲೇ ಬಂದ ಆರ್ಥಿಕಋಣ ಅಭಿಮಾನ ಋಣಗಳ ಭಾರವನ್ನು ಹೊತ್ತು, ನಗಲು ನಗಿಸಲು ಯತ್ನಿಸುತ್ತಿದ್ದಾಳೆ. ತನ್ನಸುತ್ತುಮುತ್ತು ನೋಡಿದಾಗಬರಿಯ ಕಾರ್ಮೋಡಗಳೇ ಕಂಡರೂ ಅವಳು ಬೆದರಿಲ್ಲ.

ನಿರ್ವಾಹಕರ, ಲೇಖಕರ, ಜಾಹಿರಾತುದಾರರ, ಚಂದಾದಾರರ ಅಭಿಮಾನ ಬೆಂಬಲಗಳೇ ಅವಳಿಗೆ ಶ್ರೀರಕ್ಷೆ. ಓದುಗರೂ ಲೇಖಕರೂ ಸತತವಾಗಿ ತನ್ನೊಡನೆ ಸಂವಾದ ನಡೆಸಲೆಂಬುದೇ ಅವಳ ಹಾರೈಕೆ. ಈವರ್ಷಯುಗಾದಿಯಲ್ಲಿ ಅವಳು ನುಡಿದ ಭವಿಷ್ಯ ನಿಜವಾಗುತ್ತಿರುವುದಕ್ಕಾಗಿ ಅವಳಿಗೆ ಹೆಮ್ಮೆಯಿಲ್ಲ. ಲೋಕದಲ್ಲಿ ಸತತ ಧೃವೀಕರಣ ಅಹಿ ಮಹಿರಾವಣರ ಸುತ್ತನಡೆಯುವುದು ಅವಳಿಗೆ ಇಷ್ಟವಿಲ್ಲ.

ಸುತ್ತೆತ್ತಲೂ ಹಾಸ್ಯಾಸ್ಪದವಾದ ಉರುಳಾಟ ಸೆಣಸಾಟಗಳು ನಡೆದಿವೆ. ಯಾರು ಸಾಧಿಸುವ ಪುರುಷಾರ್ಥವೇನು?

ಮಳೆಗಾಲದ ಮೋಡಗಳು ನೀರುಸುರಿಸುತ್ತಿಲ್ಲ. ಎಲ್ಲೋ ಅತಿವೃಷ್ಟಿ ಇನ್ನೆಲ್ಲೋ ಅನಾವೃಷ್ಟಿ. ಸಕಾಲ ವೃಷ್ಟಿಯಾಗಲಿ, ವೈಮನಸ್ಸುಗಳು ಇಂಗಲಿ, ಬರುವ ಶರತ್ಕಾಲ ಲೋಕಕ್ಕೆ ಹರ್ಷ ನೀಡುವಂತಾಗಲಿ ಎಂದವಳು ಹಾರೈಸುತಾಳೆ.

ಸಂಪಾದಕ.

(ಕ್ರಿ)ಕೀಟಜ್ಞ ವಚನಗಳು

ಅ. ಪ. ಹಾಸ್ಯಗಾರ್

ಬ್ಯಾಟ್ಸ್‌ಮನ್ ಉವಾಚ:

ಕಂಡವರು ಕೆರಳುವರು ಖಂಡಿತಾ ಉಗುಳುವರು
ಹೆಂಡತಿಯೂ ಕನಲುವಳು ರನ್ನುಗಳ ಒಲುಮೆಯನು
ಕಂಡುಕೊಳದಿರಲು (ಕ್ರಿ)ಕೀಟಜ್ಞ.

ನಾಯಕ ಉವಾಚ :

ರನ್ನುಗಳ ಕೊಡಬೇಡ ವಿಕೆಟುಗಳ ಬಿಡಬೇಡ
ಕುನ್ನಿಯಂತೌಟಾಗಬೇಡ ನೀನೆಲೆ ಮೂಢ
ವಿನ್ನಿಲ್ಲವೆಂದಳಲು ಬೇಡ (ಕ್ರಿ)ಕೀಟಜ್ಞ

ಅಂಪೈರ್ ಉವಾಚ :

ಕೊಟ್ಟರೆ ಔಟನು ಬ್ಯಾಟ್ಸ್‌ಮನ್ ಕೋಪ
ಬಿಟ್ಟರೆ ಗ್ಯಾಲರಿಯಿಂ ಟೊಮೆಟೊಪ
ಒಂದೆಡೆ ಡಾಕ್ಟರ್ ಬೇರೆಡೆ ರೋಗ
ಅಂಪೈರ್ ಬೆನ್ನಲಿ ಯಾವುದೊ ಶಾಪ
ಪೂರ್ವಜನ್ಮದಲಿ ಮಾಡಿದ ಪಾಪ (ಕ್ರಿ)ಕೀಟಜ್ಞ

ಅಭಿಮಾನಿ ಉವಾಚ :

ಹಸಿದ ಹುಲಿಗಳು ಅವರು ಮಶಕಗಳು ನಮ್ಮವರು
ಬಿಸಿಯು ಸೀಸದ ರಸವೊ ಕಿವಿಗಳಿಗೆ ಕಾಮೆಂಟ್ರಿ
ಕಚೇರಿ ಕೆಲಸವೇ ಲೇಸು (ಕ್ರಿ)ಕೀಟಜ್ಞ

ಯಾರು ?

ಹಿಂಡಗಲಿ ಬಂದ
ಕುರಿ
ಹಿಂಡಗಲಿಸುತ್ತಿದೆ

ಕಾಟ

ಭಿಂದ್ರನ್‌ವಾಲೆ
ಹೋದಮೇಲೆ
ಭಯೋತ್ಪಾದನೆ
ನಿಲ್ಲಲಿಲ್ಲ
ಕೂಸು ಸತ್ತರೂ
ನಾತ ತಪ್ಪಲಿಲ್ಲ

ಸ್ಮಾಗ್

"ಹೋದುದೆಲ್ಲಿಗೆ ತಂದಿರೇನನು
ಹೇಳಿಕಾದೆವು ನಾವ್ agog"
"ದೂರ ಲಾಸ್ ಏಂಜಲಿಸು, ಅಲ್ಲಿಂ
ನೂರು ಬಾಟಲಿ ತುಂಬ ಸ್ಮಾಗ್"

ನೇರನುಡಿ

ಭಾಷೈಕ್ಯತೆ ಮಾಡುವುದೆಂದು?
ಕ್ಷುಲ್ಲಕ
ರಾಜಕೀಯ ಮುಳುಗಿದಂದು !

ಸೋಮು

ಮೇಲ್ಮನೆಗೆ ಆರತಿ

-ಸುದ್ದಿ.

ಅಸೆಂಬ್ಲಿಗೆ ಅಕ್ಷತೆಯಾದರೂ ಬೀಳಬಹುದು!

ಆಗಸನಿಗೆ ಕಪಾಳಮೋಕ್ಷ: ಮಿಂಚಿನ ಮುಷ್ಕರ

-ಪತ್ರಿಕೆ.

ಕಲಿಯುಗದಲ್ಲೂ ಆಗಸನಿಂದ ಅಪವಾದವೆ?

ಮೇಯರ್ ಸ್ಥಾನ ಮಹಿಳೆಗೇ ಕೊಡಿ.

-ಶೀರ್ಷಿಕೆ.

ಫೆರಾರೋ ಪ್ರಭಾವ?

'ಶ್ರೀ' - ನಿವಾಸರ ಸಣ್ಣ ಕತೆಗಳು ನಮ್ಮಲ್ಲಿ ಹೇರಳವಾಗಿವೆ ಅಂತ ವರಮಾನ ತೆರಿಗೆ ಅಧಿಕಾರಿಗಳೊಬ್ಬರು ಬರೆದಿದ್ದಾರೆ.

1.5 ಸೀಟುಗಳು ಸಾರ್ವತ್ರಿಕ ವಿಭಾಗಕ್ಕೆ : 3.5 ಸೀಟುಗಳು ಮೀಸಲಾತಿಗೆ

-ಸುದ್ದಿ

ಮೂಗಿಗಿಂತ ಮೂಗುತಿ ಭಾರ.

ಐ. ಟಿ. ಐ. ಸಿಬ್ಬಂದಿಗಳಿಂದ ರಕ್ತದಾನ ವ್ಯವಸ್ಥೆ

-ಸುದ್ದಿ.

ದಾನಿಗಳ ಫೋನ್‌ಗಳಾದರೂ ಸಮರ್ಪಕ ವಾಗಿರಲಿ!

ಕರ್ನಾಟಕದಲ್ಲಿ ಮತ್ತೆರಡು ಮೆಡಿಕಲ್ ಕಾಲೇಜುಗಳು

-ದಿನಪತ್ರಿಕೆ.

ಈ ಸಾಂಕ್ರಾಮಿಕಕ್ಕೆ ಮದ್ದೇ ಇಲ್ಲವೆ?

ಉಪರಾಷ್ಟ್ರಪತಿ ಸ್ಥಾನಕ್ಕೆ ಆರ್. ವಿ. ಕಾಂಗ್ರೆ ಅಭ್ಯರ್ಥಿ

-ಸುದ್ದಿ.

ಸಂಕಟ ಬಂದರೆ................

ವಿಜಯನಗರ ಕಾರ್ಖಾನೆ : ವಿದೇಶಿ ಆಸಕ್ತಿ.

-ಪತ್ರಿಕೆ

ನಮ್ಮ ದೇಶದಲ್ಲಂತೂ ಆಸಕ್ತಿ ಉಕ್ಕುತ್ತಿಲ್ಲಾ!

ಇನ್ನಷ್ಟು ವಿಕ್ರಮಗಳು

ಬಿ. ಎಸ್. ಚಂದ್ರಶೇಖರ್

ವಿಶ್ವ ವಿಕ್ರಮಗಳ ಗಿನ್ನೆಸ್ ಪುಸ್ತಕ, ವಿವಿಧ ಕ್ಷೇತ್ರಗಳಲ್ಲಿನ ಅದ್ಭುತ ಸಾಧನೆಗಳನ್ನು ವರದಿ ಮಾಡುತ್ತದೆ. ನಮ್ಮ ದೇಶದವರ ಕೆಲವು ಸಾಧನೆಗಳು ಈ ಪುಸ್ತಕದಲ್ಲಿ ಬಂದಿರುವುದಾದರೂ, ಸರಿಯಾದ ಪ್ರಚಾರ ಸಿಗದೆ ಮಹತ್ವದ ವಿಕ್ರಮಗಳನೇಕ ಗಿನ್ನೇಸ್ ಗಮನಕ್ಕೆ ಬಂದಿಲ್ಲ. ಹೀಗೆ ಬಿಟ್ಟು ಹೋಗಿರುವ ಕೆಲವು ದಾಖಲೆಗಳನ್ನು ಇಲ್ಲಿ ವರದಿಮಾಡುತ್ತಿದ್ದೇನೆ.

*　　　　*

ಲತಾ ಮಂಗೇಷ್ಕರ್ ಸುಮಾರು 25 ವರ್ಷದ ಅವಧಿಯಲ್ಲಿ 25 ಸಾವಿರ ಧ್ವನಿ ಮುದ್ರಿಕೆಗಳಿಗೆ ಹಾಡಿರುವುದನ್ನು ಗಿನ್ನೇಸ್ ಗಮನಿಸಿದೆ. ಆದರೆ ಧ್ವನಿಮುದ್ರಿಕೆಗಳ ಕ್ಷೇತ್ರದಲ್ಲಿನ ಇನ್ನು ಕೆಲವು ದಾಖಲೆಗಳು ಪುಸ್ತಕದಲ್ಲಿಲ್ಲ. ಬೆಂಗಳೂರು ನಗರವೊಂದರಲ್ಲೇ, ಕಳೆದ ವರ್ಷದ ರಾಜ್ಯೋತ್ಸವ ದಿನದಂದು ಧ್ವನಿವರ್ಧಕಗಳೊಂದಿಗೆ ಏರ್ಪಡಿಸಿದ್ದ ಸಮಾರಂಭಗಳ ಸಂಖ್ಯೆ 12.600./ ಧ್ವನಿವರ್ಧಕಗಳ ಮೂಲಕ ಕನ್ನಡ ಭುವನೇಶ್ವರಿಯ ಅತಿಪ್ರೀಯ ಚಿತ್ರಗೀತೆಗಳನ್ನು ಕಿರಿಚಿಸಿದ್ದು ಸಮಾರಂಭವೊಂದಕ್ಕೆ ಸರಾಸರಿ 14 ಗಂಟೆ. ಆದಿನ ಹಲವಾರು ವರ್ಷಗಳಿಂದ ಒಂದೇ ಸಮ ಜನಪ್ರಿಯವಾಗಿರುವ ಎಮ್ಮೆ ಹಾಡು 1,75,600 ಬಾರಿ ಗಾಳಿಗೆ ತೇಲಿತು. ಇದೊಂದು ವಿಶ್ವ ವಿಕ್ರಮ. ಆ ದಿನ ತಮ್ಮ ಮನೆಗೆ 18 ಮೂಲೆಗಳಿಂದ ಬರುತ್ತಿದ್ದ ಧ್ವನಿವರ್ಧಕಗಳಿಂದ ಈ ಹಾಡನ್ನು ಒಟ್ಟು 708 ಬಾರಿ ಕೇಳಿದ, ರಾಜಾಜಿನಗರದ ಪ್ರಾಣೇಶಾಚಾರ್ಯರಿಗೆ ಒಟ್ಟು ಎಮ್ಮೆಯ ಮೇಲೆ ಅಲರ್ಜಿ ಬಂದು, ಎಮ್ಮೆಯ ಹಾಲಿನ ಕಾಫಿ ಕುಡಿದರೆ ಮುಖದ ಮೇಲೆ ಗುಳ್ಳೆ ಏಳುತ್ತಿದೆ ಎನ್ನುವುದು ಈ ವಿಕ್ರಮಕ್ಕೆ ಸಂಬಂಧಪಟ್ಟ ಆಸಕ್ತಿಕರ ಅಂಶ.

ಧ್ವನಿಮುದ್ರಿಕೆಗಳ ಬಳಕೆಯ ಇನ್ನೊಂದು ವಿಶ್ವ ವಿಕ್ರಮ ನಮ್ಮ ಕರುನಾಡ ಬಾನುಲಿ ನಿಲಯವೊಂದಕ್ಕೆ ಸಲ್ಲುತ್ತದೆ. ಅದು ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಂದು ಧ್ವನಿಮುದ್ರಿಕೆಯನ್ನು 1065ಬಾರಿ ಪ್ರಸಾರ ಮಾಡಿದೆ. ಪ್ರತಿದಿನ ಬೆಳಿಗ್ಗೆ ಮಧ್ಯಾಹ್ನ, ಸಂಜೆ ತಪ್ಪದೆ ಪ್ರಸಾರವಾಗುತ್ತಿದ್ದ ಈ ಗೀತೆ ನಿವೇದಕಿಯೊಬ್ಬರ ಬೇಜವಾಬ್ದಾರಿಯಿಂದ 10ದಿನ ಪ್ರಸಾರವಾಗಲಿಲ್ಲವಂತೆ.

*　　　　*

ಅತಿ ಉದ್ದದ ಕೈ ಉಗುರು ಬೆಳೆಸಿದ ಖ್ಯಾತಿ ಪುಣೆಯ ಶ್ರೀಧರ್ ಚಿಲ್ಲಾಲ್ ಅವರದು. ಇವರು 321.3 ಸೆಂ. ಮೀ. ಉದ್ದದ ಉಗುರುಗಳನ್ನು ಎಡಗೈನ ಐದು ಬೆಟ್ಟುಗಳಲ್ಲಿ ಹೊಂದಿದ್ದರಂತೆ. ಗಿನ್ನೆಸ್ ಈ ಸಾಧನೆಯನ್ನು ಗಮನಿಸಿದೆ. ಆದರೆ ಇದ್ದ ಚಿಕ್ಕ ಉಗುರುಗಳನ್ನು ಅತಿ ಹೆಚ್ಚು ಜನರ ಮೇಲೆ ಪ್ರಯೋಗಿಸಿ ತನಗೆ ಬೇಕಾದ್ದನ್ನು ಪಡೆದ ಖ್ಯಾತಿ 5 ವರ್ಷದ ಬಾಲಕ ರಾಘವೇಂದ್ರ ಗುರುಪ್ರಸಾದನದು (ಮುದ್ದಿಗೆ ರಾಘಣ್ಣ). ಅವನ ಅಪ್ಪ, ಅಮ್ಮ, ಅಜ್ಜಿ, ಪಕ್ಕದ ಮನೆಯವರು ಅಂಕಲ್, ಆಂಟೀ, ಅವರ ಮಕ್ಕಳು - ಎಲ್ಲರ ಮೇಲೂ ತನ್ನ ನಖವನ್ನು ಪ್ರಯೋಗಿಸಿ ಬೇಕಾದ್ದನ್ನು ಗಿಟ್ಟಿಸುತ್ತಿದ್ದ ರಾಘಣ್ಣ, ಶಿಶುವಿಹಾರಕ್ಕೆ ಸೇರಿಸಿದ ಮೊದಲನೆಯ ದಿನವೇ ಜೊತೆಯಲ್ಲಿದ್ದ 26 ಜನ ಬಾಲಕ, ಬಾಲಕಿಯರನ್ನು ಚಿಗುಟಿ ಅಳಿಸಿ ಸಧ್ಯ ನೀನು ಈ ಸ್ಕೂಲಿಗೆ ಬರಬೇಡ ಎಂದು ಅಧ್ಯಾಪಕಿಯಿಂದ ಅಪ್ಪಣೆ ಪಡೆದ ಕೀರ್ತಿ ಅವನದು. ಶಾಲೆಗೆ ಹೋಗದಿರುವಂತೆ ಆಗಲಿ ಎಂದು ಇವನೇ ಬಯಸಿದ್ದ ಎಂದು ಬೇರೆ ಹೇಳಬೇಕಾಗಿಲ್ಲ.

*　　　　*

ಜಾಮ್ನಗರದಲ್ಲಿ ಆಚಾರ್ಯ ಪ್ರೇಂ ಭಿಕುಜಿ 1964ರಲ್ಲಿ ಪ್ರಾರಂಭಿಸಿದ ಅಖಂಡ ರಾಮಭಜನೆ 1977ರ ವರೆಗೂ ಒಂದೇ ಸಮ 13 ವರ್ಷ ಪಡೆದ ದಾಖಲೆಯನ್ನು ಗಿನ್ನೆಸ್ ವರದಿ ಮಾಡಿದೆ. ಆದರೆ ಧಾರವಾಡ ಜಿಲ್ಲೆಯ ತೆರೆದಾಳ ಗ್ರಾಮದ ರಾಧಾಬಾಯಿ ಸಾಧನೆ ಬಿಟ್ಟು ಹೋಗಿದೆ. ಹೆಸರಿಗೆ ತಕ್ಕಂತೆ ರಾಧಾಬಾಯಿ ತೆರೆದಾಳ, ತನ್ನ 78 ವರ್ಷದ ಜೀವನದಲ್ಲಿ ಯಾವಾಗಲೂ ಬಾಯಿ ತೆರೆದೇ ಇರುತ್ತಿದ್ದಳು ಎಂದು ಈತೆರೆದ ಬಾಯಿಯಿಂದ ಬೇರೆಬೇರೆ ಸಮಯದಲ್ಲಿ ಜೀವರೋಸಿಹೋಗಿರುವ ಈಕೆಯ ತಾಯಿ, ಗಂಡ, ಸೊಸೆಯರು ಪ್ರಮಾಣ ಮಾಡಿ ಹೇಳಿದ್ದಾರೆ. ಹನ್ನೊಂದನೆಯ ವರ್ಷದಲ್ಲಿ ಮದುವೆಯಾಗುವವರೆಗೂ ಒಂದೇ ಸಮ ಹಠಮಾಡುತ್ತಿದ್ದ ಅಪರೂಪದ ಮಗು ಎಂದು ರಾಧಾಬಾಯಿಯ ಬಾಲ್ಯಕಂಡವರು ಇನ್ನೂ ಮಾತನಾಡಿಕೊಳ್ಳುತ್ತಾರೆ ಮದುವೆಯಾದ ಎರಡುವರ್ಷದಲ್ಲಿ ಅತ್ತೆ ಸತ್ತು, ಅಂದಿನಿಂದ ರಾಧಾಬಾಯಿಯ ಬಾಯಿಗೆ ಬಿದ್ದವನು ಗಂಡ ಪ್ರಹ್ಲಾದಾಚಾರ್ಯ. ಈ ಶಬ್ದ ಪ್ರವಾಹದಿಂದ ತಪ್ಪಿಸಿಕೊಳ್ಳಲು ಭಗವದ್ಗೀತೆಯ ಪಠನವನ್ನು ಪ್ರಾರಂಭಿಸಿದ ಆಚಾರ್ಯರು ಅಲ್ಲಿ ಶಾಂತಿ ಕಾಣದ ಸನ್ಯಾಸ ತೆಗೆದುಕೊಂಡು ದೂರದ ಹಿಮಾಲಯಕ್ಕೆ ಹೋದವರು ಮತ್ತೆ ಹಿಂದೆ ಬರಲಿಲ್ಲ. ಮುಂದೆ ಬಂದ ಸೊಸೆಯರು ನಾಲ್ಕಾರು ವರ್ಷ ಈಕೆಯ ಬೈಗುಳ ಜಲಪಾತವನ್ನು ತಡೆದುಕೊಂಡು ಮುಂದೆ ಸೇರಿಗೆ ಸವ್ವಾಸೇರು ಆದಾಗ ಅವರಿದ್ದ ಬೀದಿಯ ಮನೆಗಳ ಬಾಡಿಗೆ ಕಡಿಮೆಯಾದ್ದು ಇನ್ನೊಂದು ಆಸಕ್ತಿಕರ ಅಂಶ.

*　　　　*

ಒಂದೇ ವರ್ಷದಲ್ಲಿ ಅತಿಹೆಚ್ಚು ನೀರು ಸುರಿದ ದಾಖಲೆ ಚಿರಾಪುಂಜಿಯದು. ಒಟ್ಟು 1042 ಅಂಗುಲ ಮಳೆಬಿದ್ದಿರುವುದನ್ನು ಗಿನ್ನೀಸ್ ಪುಸ್ತಕ ತಿಳಿಸುತ್ತದೆ. ಆದರೆ ಒಂದು ಪೂರ್ಣ ವರ್ಷದಲ್ಲಿ ಒಟ್ಟು ಅರ್ಧ ಬಕೇಟ್ ನೀರು ಮಾತ್ರ ಸುರಿಸಿರುವ ಬೆಂಗಳೂರು ವಿಜಯನಗರ ಬಡಾವಣೆಯ ಒಂದು ನಳದ ದಾಖಲೆ ಅವರ ಗಮನಕ್ಕೆ ಬಂದಿಲ್ಲ. ಈ ನಳಕ್ಕಾಗಿ ಜಲಮಂಡಳಿ ನಿಗದಿತ ಶುಲ್ಕವನ್ನು ಕ್ರಮವಾಗಿ ವಸೂಲು ಮಾಡುತ್ತಿದ್ದರೂ, ವಾರಕ್ಕೊಮ್ಮೆ ಗಾಳಿ ಬಿಡುತ್ತಿದ್ದ ಈ ನಳದಲ್ಲಿ ಬೆಂಗಳೂರಿನಲ್ಲಿ ಒಂದೇ ದಿನ 10 ಸೆ. ಮೀ. ಮಳೆಬಂದ ದಿನ ನೀರು ಹನಿಯಿತು. ಆ ನೀರು ನಳದ ಪೈಪಿನೊಳಗಿನಿಂದ ಬಂದಿತೆ ಅಥವಾ ಸೋರುವ ಮನೆಯ ಹಂಚಿನಿಂದ ಇಳಿಯಿತೆ ಎನ್ನುವ ಅನುಮಾನ ಇನ್ನೂ ಪರಿಹಾರವಾಗಿಲ್ಲ.

*　　　　*

ಗಿನ್ನೀಸ್ ಗಮನಿಸಿರುವ ಒಟ್ಟು 8 ಅಡಿ 6 ಅಂಗುಲ ಉದ್ದದ ಮೀಸೆ ಹೊಂದಿದ ಕೀರ್ತಿ ಉತ್ತರ ಪ್ರದೇಶದ ಮಸೂರಿಯಾ ದಿನ್ ಎನ್ನುವ ಹೆಸರಿನ ವ್ಯಕ್ತಿಯದು. ಆದರೆ ಇರುವ ಒಂದು ಅಂಗುಲ ಮೀಸೆಯನ್ನು ಒಂದೇ ಗಂಟೆಯಲ್ಲಿ 260 ಬಾರಿ ತಿರುವಿದ ಕೀರ್ತಿ ಬೆಳಗಾಂ ಜಿಲ್ಲೆಯ ಸಂಗನಗೌಡ ಬಸವನಗೌಡ ಪಾಟೀಲನದು. ತಾನು ನೋಡಿದ ತೆಲುಗು ಪೌರಾಣಿಕ ಚಿತ್ರದಿಂದ ಮೀಸೆ ತಿರುವುದು ಪೌರುಷದ ಲಕ್ಷಣ ಎಂದು ತಿಳಿದಿದ್ದ ಪಾಟೀಲ ತನ್ನ ಸಾಧನೆಯ ಶಿಖರವನ್ನು ಈ ವರ್ಷವಷ್ಟೇ ಮುಟ್ಟಿದ್ದಾನೆ.

o　　　　o

ಗಣಿತ ಪ್ರವೀಣೆ ಶಕುಂತಲಾದೇವಿ 13 ಅಂಕಗಳನ್ನು 13 ಅಂಕಗಳಿಂದ ಗುಣಿಸುವ ಲೆಕ್ಕವನ್ನು 28 ಸೆಕೆಂಡ್‌ಗಳಲ್ಲಿ ಸರಿಯಾಗಿ ಮಾಡಿದ ದಾಖಲೆ ಗಿನ್ನೀಸ್ ಪುಸ್ತಕದಲ್ಲಿ ಬಂದಿದೆ. ಜಾಣ ಗೆರೆಯ ಗಂಡುಮಕ್ಕಳ ಶಾಲೆಯ ಏಳನೆಯ ತರಗತಿ 63 ವಿದ್ಯಾರ್ಥಿಗಳು ಮೂರು ಅಂಕೆಯ ಗುಣಾಕಾರ ಲೆಕ್ಕವನ್ನು 125 ಪ್ರತ್ಯೇಕ ರೀತಿಗಳಲ್ಲಿ ತಪ್ಪುಮಾಡಿದ ದಾಖಲೆ ಬಿಟ್ಟು ಹೋಗಿದೆ. ಮನೆಲೆಕ್ಕವಾಗಿ ಕೊಟ್ಟಿದ್ದ ಈ ಸಮಸ್ಯೆಯನ್ನು ಎಲ್ಲಾ 63 ವಿದ್ಯಾರ್ಥಿಗಳೂ ತಪ್ಪಾಗಿ ಮಾಡಿರುವುದನ್ನು ನೋಡಿ ಶಾಲೆಯಲ್ಲಿ ಅದೇ ಲೆಕ್ಕವನ್ನು ಮತ್ತೆ ಮಾಡುವಂತೆ ಶಿಕ್ಷಕರು ಹೇಳಿದಾಗ ಒಬ್ಬನನ್ನು ಬಿಟ್ಟು ಉಳಿದವರೆಲ್ಲಾ ಬೇರೆ ಬೇರೆ ರೀತಿಗಳ ತಪ್ಪು ಮಾಡಿದ್ದರು. ಸರಿಯಾದ ಒಂದು ಉತ್ತರ ನಿಜವಾಗಿಯೂ ಸರಿಯಾದ ಮಾರ್ಗದಲ್ಲಿ ಕಂಡುಕೊಂಡ ಉತ್ತರವೇ ಅಥವಾ ತಪ್ಪು ದಾರಿಯಲ್ಲಿ ಎಡವಿ ಅಕಸ್ಮಾತ್ ಸಿಕ್ಕ ಉತ್ತರವೇ ಸ್ಪಷ್ಟವಾಗಿಲ್ಲ.

ವಿಜಯನಗರದ ರಾಣಿ ತಿರುಮಲಾಂಬ 16 ನೆಯ ಶತಮಾನದಲ್ಲಿ ರಚಿಸಿದ ಸಂಸ್ಕೃತ ಕೃತಿಯೊಂದರಲ್ಲಿ 195 ಅಕ್ಷರಗಳ ಒಂದೇಸಂಯುಕ್ತ ಪದವಿರುವುದನ್ನು ಗಿನ್ನೀಸ್ ಗಮನಿಸಿ ಇದೊಂದು ವಿಶ್ವದಾಖಲೆಯನ್ನುತ್ತದೆ. ಕನ್ನಡ ನವ್ಯ ವಿಮರ್ಶ ರೊಬ್ಬರು, 208 ಪದಗಳ ಒಂದೇವಾಕ್ಯದಲ್ಲಿ ಅತಿ ನವ್ಯ ಕವನವೊಂದನ್ನು ಪರಿಚಯ ಮಾಡಿಕೊಟ್ಟಿರುವ ಲೇಖನ ಇದೇರೀತಿಯ ವಿಶ್ವಮಾನ್ಯತೆಯನ್ನು ಗಳಿಸುವುದು ತಪ್ಪಿ ಹೋಗಿದೆ. ಓ ದು ಗ ರಾ ರಿ ಗೂ ಈ ಪದ್ಯದಲ್ಲಾಗಲಿ, ವಿಮರ್ಶೆಯಲ್ಲಾಗಲಿ ಒಂದೇಒಂದು ಪದವೂ ಅರ್ಥವಾಗಲಿಲ್ಲ ಎನ್ನುವುದು ಇಲ್ಲಿ ಪ್ರಕೃತವಲ್ಲದ ಅಂಶ.

o o

ಬಬ್ಬನ್ ಖಾನ್‌ನ 'ಅದ್ರಕೆ ಪಂಜೆ' ನಾಟಕ ಒಟ್ಟು 5000 ಬಾರಿ ಪ್ರದರ್ಶನ ಗೊಂಡಿರುವುದು ವಿಶ್ವದಾಖಲೆಯೆಂದು ಗಿನ್ನೀಸ್ ಒಪ್ಪಿಕೊಂಡಿದೆ. ಆದರೆ ನಮ್ಮ 'ಪ್ರಹಸನ ಪ್ರತಾಪರುದ್ರ' ಒಟ್ಟು 143 ನಾಟಕಗಳನ್ನು ಬರೆದಿದ್ದು, ಅವುಗಳಲ್ಲಿ ಒಂದಾದರೂ, ಒಂದು ಬಾರಿಯೂ ರಂಗದ ಮೇಲೆ ಬರದಿರುವ ಅಪೂರ್ವ ಸಾಧನೆ ಗಿನ್ನೀಸ್ ಗಮನಕ್ಕೆ ಬಂದಿರುವಂತಿಲ್ಲ. ಪ್ರತಾಪರುದ್ರರು ನಿರಾಶರಾಗದೆ ತಮ್ಮ ಕಾಯ ಕವನ್ನು ಮುಂದುವರಿಸಿಕೊಂಡೇ ಬರುತ್ತಿರುವುದರಿಂದ ಒಂದಲ್ಲಒಂದು ದಿನ ಇವರ ಸಾಧನೆ ವಿಶ್ವದ ಗಮನಕ್ಕೆ ಬರಬಹುದು.

ಡಿಸ್ಪೆನ್ಸರಿಯೊಳಗೆ ಕಾಲಿಡುವಾಗ ಎಂದಿನಷ್ಟು ನೂಕು ನುಗ್ಗಲು ಇಲ್ಲದಿರುವು ದನ್ನು ಸ್ನೇಹಿತರು ಗಮನಿಸಿದರೆ ಡಾ। ದಂಡಯ್ಯ ಕೂಡಲೆ ಹೇಳಿ ಬಿಡುತ್ತಾನೆ. " ಯಾಕೋ ಪೇಶಂಟ್ಸೇ ಇಲ್ಲ.... ಸತ್ಯನಾರಾಯಣ ಮಾಡಿಸಬೇಕು.... ಊರಲ್ಲಿ ಕಾಯಿಲೆ ಹೆಚ್ಚಾಗಲಿ ಅಂತ ".

ಆದರೆ ಕಾಯಿಲೆಯವರ ಸಂಖ್ಯೆ ಹೆಚ್ಚಾಗೋದಕ್ಕಾದರೂ ಈತ ಸತ್ಯನಾರಾಯಣ ಮಾಡಿಸೋದಿದ್ದರೆ ಚೆನ್ನಾಗಿತ್ತು–ದೇವರಿಲ್ಲ ಎಂದು ಸಾಧಿಸುವ ನಾಸ್ತಿಕ.!

ಆದರೆ ಸತ್ಯನಾರಾಯಣದ ಬಗ್ಗೆ ಹೀಗೆ ಗೇಲಿ ಮಾಡುವ ಆಸಾಮಿಯಾದರೂ ಸತ್ಯನಾರಾಯಣ ಸ್ವಾಮಿಗೆ ಪ್ರಿಯವೆನಿಸುವ ಸಪಾತ ಭಕ್ಷ ಈತನಿಗೂ ಅತ್ಯಂತ ಪ್ರಿಯ. ವ್ರತ ಕಥೆಯಲ್ಲಿ ಬರುತ್ತಲ್ಲ-ಇಷ್ಟು ಸಕ್ಕರೆ, ಇಷ್ಟು ರವಾ, ಇಷ್ಟು ತುಪ್ಪ, ಇಷ್ಟು ಬಾಳೆ ಹಣ್ಣು ಸೇರಿಸಿ ತಯಾರಿಸುವ ಪಾಕ ವಿಶೇಷವನ್ನು ಸತ್ಯನಾರಾಯಣ ನಿಗೆ ಅರ್ಪಿಸಿ ಭಕ್ತಾದಿಗಳು ರುಚಿ ನೋಡುವುದು ಕೂಡ ನೋಡೋದಕ್ಕೆ ಚಂದ. ಸತ್ಯನಾರಾಯಣ ಮಾಡಿಸಿದ ಪೇಶಂಟುಗಳು ಪ್ರಸಾದವನ್ನು ಡಾ। ದಂಡಯ್ಯನಿಗೆ ರುಚಿ ತೋರಿಸಿ ತೋರಿಸಿ ದಂಡಯ್ಯನನ್ನೇ ವ್ರತಾಚರಣೆಗೆ ಹಚ್ಚುವುದು ಸಾಧ್ಯ ಅಂತ ಮಾತ್ರ ನಾವು ಭಾವಿಸಿರಲಿಲ್ಲ.

ಗುಡಿಯ ಅರ್ಚಕರ ತಾಯಿಯ ಕೈ ಸಪಾತ ಭಕ್ಷ ತಯಾರಿಯಲ್ಲಿ ಬಹಳ ಪಳಗಿತ್ತು ಅಂತ ತಿಳಿದ ದಂಡಯ್ಯ ಒಂದಷ್ಟು ಮಾಡಿಸಿ ಕಳಿಸುವಂತೆ ದುಂಬಾಲು ಬಿದ್ದ. ಆದರೆ ಸಪಾತ ಭಕ್ಷ ಬಾಯಿ ಚಪಲಕ್ಕೆ ಮಾಡತಕ್ಕದ್ದಲ್ಲ ವ್ರತದ ಅಂಗವಾಗಿ ತಯಾರಿಸತಕ್ಕದ್ದು ಎಂದು ಶಾಸ್ತ್ರಿಗಳು ಕಟ್ಟುನಿಟ್ಟಾಗಿ ಹೇಳಿದಾಗ ಏನು ವ್ರತ ಬೇಕಾದರೂ ಮಾಡಿಕೊಳ್ಳಿ. ಸಪಾತ ಭಕ್ಷ ಕಳಿಸಿ ಅಂತ ನೂರರ ನೋಟನ್ನು ನೀಡಿದ್ದ ದಂಡಯ್ಯ. ಆಗ ಶಾಸ್ತ್ರಿಗಳು ಪೂಜೆಗೆ ಬರಬೇಕೆಂದು ತಾಕೀತು ಮಾಡದಿರು ತ್ತಾರೆಯೆ ?. ಅದೆಲ್ಲಾ ಆಗುವ ಹಾಗಿಲ್ಲ ಅಂತ ದಂಡಯ್ಯ ಉಡಾಫೆ ಮಾಡಿದರೆ ಶಾಸ್ತ್ರಿಗಳು ಗುಟ್ಟಾಗಿ ದಂಡಯ್ಯನ ಮನೆಗೆ ಹೋಗಿ ದಂಡಯ್ಯನ ತಾಯಿ ಮತ್ತು ಹೆಂಡತಿ ಮಕ್ಕಳನ್ನು ಪೂಜೆಗೆ ಬರುವಂತೆ ಒಪ್ಪಿಸಿದರು.


ದಂಡಯ್ಯನ ಲೆಕ್ಕದಲ್ಲಿ ಸತ್ಯನಾರಾಯಣ ನಡೆದೇ ಹೋಯಿತು ದಂಡಯ್ಯ ಆ ಕಡೆ ಕಾಲಿಡದಿದ್ದರೂ ದೊನ್ನೆ ತುಂಬ ಸಪಾತ ಭಕ್ಷ ಬಂದೇ ಬಂತು, ಹೂವಿನ ಪ್ರಸಾದದ ಘಮ ಘಮದೊಡನೆ ಸ್ನೇಹಿತರಾದ ನಮಗೂ ಕಳಿಸಿಕೊಟ್ಟಿದ್ದ.

“ ಮಹರಾಯ ಸತ್ಯನಾರಾಯಣ ಮಾಡಿಸಿ ಪೇಷಂಟುಗಳ ಸಂಖ್ಯೆ ಹೆಚ್ಚಿಸಿ ಕೊಳ್ಳುತ್ತೇನೆಂದು ಹೇಳಿ ಹೇಳಿ ಕೊನೆಗೂ ಮಾಡಿಸಿಯೇ ಬಿಟ್ಟೆಯೇನೋ....ಇನ್ನು ಊರಿನ ಗತಿಯೇನೋ ” — ಎಂದು ದಂಡಯ್ಯನಿಗ ತಗುಲಿಕೊಂಡವ್ರು.

ಸತ್ಯನಾರಾಯಣ ಆಗಲೇ ಫಲಕೊಡೋದಕ್ಕೆ ಶುರುಮಾಡಿತ್ತು. ಡಿಸ್ಪೆನ್ಸರಿಯಲ್ಲಿ ಕಾಲಿಡೋದಕ್ಕೆ ಜಾಗವಿಲ್ಲ, ಡಾ। ದಂಡಯ್ಯನಿಗೆ ಸಣ್ಣಗೆ ನಗೋದಕ್ಕೆ ಮಾತ್ರ ಪುರಸೊತ್ತು.!

ಪುಣ್ಯಾತ್ಮ ತಿಂಗಳು ತಿಂಗಳೂ ಹುಣ್ಣಿಮೆಯ ದಿನ ದೊನ್ನೆ ತುಂಬ ಸಪಾತ ಭಕ್ಷ ಕಳಿಸೋದಕ್ಕೆ ಶುರು ಮಾಡಿದ್ದಾನೆ. ಶಾಸ್ತ್ರಿಗಳ ಏರ್ಪಾಡು ! ದಂಡಯ್ಯನನ್ನ ಕೇಳಿ ಅಲ್ಲ. ಮನೆಯವರು ಬಿಡುತ್ತಾರೆಯೆ ? ದಂಡಯ್ಯನದೂ ಅಬ್ಜಕ್ಷನ್ ಇದ್ದ ಹಾಗಿಲ್ಲ, ದೊನ್ನೆ ತುಂಬ ಗೊತ್ತಲ್ಲ.......!

ಯಥಾ ಪ್ರಕಾರ ಡಿಸ್ಪೆನ್ಸರಿಯಲ್ಲಿ ಕಾಲಿಡೋದಕ್ಕೆ ಜಾಗ ಇಲ್ಲ, ಊರಿನಲ್ಲಿ ಯಾರಿಗೂ ಸೌಖ್ಯವಿಲ್ಲ !.



ಕನ್ನಡ Vs ಇಂಗ್ಲೀಷ್

ಬಿ. ಎಸ್. ಚಂದ್ರಶೇಖರ್

ಹೊಸ ಶಾಲಾವರ್ಷ ಆರಂಭವಾದಾಗಿನಿಂದ ಅತಿಜಾಣಗೆರೆಯ ವಿದ್ಯಾಮರ್ದಿನಿ ಪ್ರೌಢಶಾಲೆಯ ಅಧ್ಯಾಪಕರ ಕೊಠಡಿ ರಣರಂಗವಾಗಿದೆ. ಒಂದು ಗುಂಪು ಈಗಿರುವ ಇಂಗ್ಲೀಷ್ ಪದ್ಧತಿಯೆ ಮುಂದುವರಿಯಬೇಕು ಎಂದು ಹಠ ಹಿಡಿದಿದ್ದರೆ, ಇನ್ನೊಂದು ಪಕ್ಷ ನಾವು ಕನ್ನಡಿಗರು, ನಮ್ಮ ಉಸಿರು ಕನ್ನಡ, ನಮ್ಮ ಹೆಸರೂ ಕನ್ನಡವಾಗಬೇಕು ಎಂದು ಘೋಷಿಸುತ್ತಿದೆ.

ಈ ಜಗಳ ಭಾಷಾ ಬೋಧನೆ ಅಥವಾ ಭಾಷಾಮಾಧ್ಯಮಕ್ಕೆ ಸಂಬಂಧಿಸಿದ್ದಲ್ಲ. ಅದರ ಹಿನ್ನಲೆ ಬೇರೆ. ಮನೆಯಲ್ಲಿ ಒಂದು ಮಗು ಹುಟ್ಟಿದಾಗ ಅದರ ನಾಮಕರಣ ಒಂದು ರಾಮಾಯಣವೇ ಆಗಬಹುದು. ಅಮ್ಮ, ಮಹಿಳೆಯರ ಕಾದಂಬರಿಗಳು. ಸಿನಿಮಾ ಪತ್ರಿಕೆಗಳು, ವಿವಿಧ ಭಾರತಿ ಮೆಚ್ಚಿನ ಗೀತೆಗಳ ಕಾರ್ಯಕ್ರಮಗಳಿಂದ ಕೊನೆಗೂ ತನಗಿಷ್ಟವಾದ ಹೆಸರನ್ನು ಹುಡುಕಿಡಬಹುದು. ಈ ಹೆಸರಿನ ಬಗೆಗೆ ಅಪ್ಪ–ಅಮ್ಮ, ಅಮ್ಮ–ಅಜ್ಜಿ, ಅಮ್ಮ–ಸೋದರತ್ತೆ ಗಳ ನಡುವೆ ಬಿರುಸಿನ ವಾಗ್ವಾದವಾಗಿರಬಹುದು. ಕೊನೆಗೆ ಜಾತಕಕ್ಕೊಂದು, ಕರೆಯಲೊಂದು ಶಾಲೆಗೊಂದು ಹೆಸರಿನ ಬಗೆಗೆ ಒಪ್ಪಂದವಾಗಿರಬಹುದು. ಆದರೆ ಈ ಮಗು ಬೆಳೆದ ಮೇಲೆ ಹೈಸ್ಕೂಲ್ ಮೇಷ್ಟರಾದರೆ ಎಲ್ಲಾ ಶ್ರಮ ವ್ಯರ್ಥವಾಗಾತ್ತದೆ, ರಿಟೈರ್ ಆಗಾವವರೆಗೂ ಅವನು ಎಂ ಎಸ್ ಎಸ್ ಅಥವ ಆರ್ ಕೆ ಸಿ ಯಾಗಿಯೇ ಉಳಿಯುತ್ತಾನೆ.

ಈ ವರ್ಷ ಹೊಸದಾಗಿ ಕೆಲಸಕ್ಕೆ ಸೇರಿರುವ ಮೇಲುಕೋಟೆ ಅಪ್ಪಣ್ಣಯ್ಯಂಗಾರಿ ದೊರೆಸ್ವಾಮಿ ಈ ಇಂಗ್ಲೀಷ್ ಸಂಕೇತನಾಮ ಪದ್ಧತಿ ಬೇಡ. ಅನಕೃ, ತರಾಸು ದಾರಿಯಲ್ಲಿ ಅಪ್ಪಟ ಕನ್ನಡ ಸಂಕೇತನಾಮವನ್ನು ವೇಳಾಪಟ್ಟಿಯಲ್ಲಿ ತೋರಿಸಬೇಕು ಎಂದು ವಾದವನ್ನು ಹೂಡಿದ್ದಾನೆ. ಅವನ ಚಳವಳಿಯ ಸ್ವಾರ್ಥ ಸುಲಭವಾಗಿ ಅರ್ಥವಾಗುತ್ತದೆ. ಹೈಸ್ಕೂಲ್, ಪಿ ಯು ಸಿ ಓದುತ್ತಿರುವಾಗಲೆ ದೊರೆಸ್ವಾಮಿ, ಎಂ. ಎ. ಎಂದು ಬರೆದುಕೊಂಡು ಸಂತೋಷ ಪಡುತ್ತಿದ್ದವನಿಗೆ, ಒಂದು ದಿನ ಅವನ ಆಪ್ತ ಸ್ನೇಹಿತ "ಏನೋ ಮ್ಯಾಡ್ ಹೀಗೇಕೆ ಕೂತಿದಿಯೋ" ಎಂದಾಗ ಅವನ ಹೆಸರಿನಲ್ಲೇ ಇರುವ ಅಪಾಯ ಅರ್ಥವಾಗಿದ್ದು. ಅಂದಿನಿಂದ ಇನಿಷಿಯಲ್ ಅವಿಸಿಡುತ್ತಿದ್ದ. ಈಗ ಕೆಲಸಕ್ಕೆ ಸೇರಿದ ಕೂಡಲೇ ವಿದ್ಯಾರ್ಥಿಗಳು ಇವನನ್ನು ಮ್ಯಾಡ್ ಎಂದು ಕರೆಯುವಂತಾದರೆ ಕೆಲವೇ ವರ್ಷಗಳಲ್ಲಿ ಹುಚ್ಚು ಹಿಡಿಯಬಹುದು ಎನ್ನುವುದು ಇವನ ಭಯ. 'ನಿನ್ನ ಬೆಪ್ಪು ಮೂರ್ತಿ ನೋಡಿ ಸರಿಯಾದ ಹೆಸರು ಇಟ್ಟಿದ್ದಾರೆ ನಿಮ್ಮ ಮನೆಯವರು' ಎಂದು ಬಿ ಎಡ್ ಸಹಪಾಠಿಗಳು ಹೇಳುತ್ತಿದ್ದು

ದನ್ನು ದೊರೆಸ್ವಾಮಿ ಮರೆಯಲಾರ.

ದೊರೆಸ್ವಾಮಿಗೆ ಬೆಂಬಲವಾಗಿ ನಿಂತಿರುವವನು, ಯಾವಾಗಲೂ ನಾಲಿಗೆ ಹೊರಗೆ ಚಾಚಿರುವ, ದಾನಪ್ಪ ಓಂಕಾರಪ್ಪ ಗುಳೇದ ಗುಡ್ಡ. ಇವನ ಹೆಸರನ್ನು 'ಡಿಓಜಿ' ಎಂದು ತೋರಿಸಿದರೆ ತನ್ನದು ನಾಯಿಪಾಡೇ ಆಗುತ್ತದೆ ಎನ್ನುವುದು ದಾನಪ್ಪನ ಭಯ. ಇವರ ಚಳವಳಿಗೆ ಪ್ರೋತ್ಸಾಹ ಕೊಡುತ್ತಿರುವವರು ಡಿ. ಐ. ಮಂಜುಳ (ಡಿಮ್–ಮಂಕು) ಹಾಗೂ ಬಿ. ಯು. ಜಾರ್ಜ್ (ಬಗ್–ತಿಗಣೆ)

ಕನ್ನಡ ಪದ್ಧತಿಯನ್ನು ವಿರೋಧಿಸುವುದರಲ್ಲಿ ಮುಖ್ಯರು–ಹಳೇಹುಲಿಗಳಾದ ಸಾಲಿಗ್ರಾಮದ ಸುಬ್ಬಯ್ಯ ವೆಂಕಟೇಶ ಹಾಗೂ ಮೆಳ ಕೋಟೆ ನರಸಯ್ಯ ಸುರೇಶ. ವೆಂಕಟೇಶ ಕಪ್ಪಗೆ ದುಂಡಗೆ ಇದ್ದಾನೆ. ಸುರೇಶ ಕೆಂಪಗೆ–ಸ್ವಲ್ಪ ಕಡಿಮೆ ದುಂಡಗೆ ಇದ್ದಾನೆ. ಇಬ್ಬರದೂ ಯಾವಾಗಲೂ ಖಾರದ ಮಾತುಗಳು. ಮೆಣಸು, ಸಾಸುವೆ ಅನ್ವರ್ಥವಾಗುವ ನಾಮಗಳು. ಕನ್ನಡವನ್ನೇ ಪಾಠಮಾಡುವ ಕೋಳ್ಳೆಗಾಲದ ಲಕ್ಷ್ಮಯ್ಯ ಕರಿಯಪ್ಪ (ಕೊಳಕ) ಕನ್ನಡ ನಾಮದ ವಿರೋಧಿ. ಮದ್ದೂರಿನ ಗಣೇಶ ರಾಮ ಈಗ ಎಂಜಿ ಆಗಿ ಕೆಲವೊಮ್ಮೆ ಮಹಾತ್ಮಗಾಂಧಿ ಎಂದು ಕರೆಸಿಕೊಳ್ಳುತ್ತಿರುವವನು ಕನ್ನಡದಲ್ಲಿ ಎಲ್ಲರ 'ಮಗ' ನಾಗಿರಲು ಇಷ್ಟಪಡುವುದಿಲ್ಲ.

ಎರಡೂ ಗುಂಪುಗಳ ನಡುವೆ ರಾಜಿ ಸಾಧ್ಯವಿಲ್ಲವೆಂದು ತಿಳಿದಾಗ ಪ್ರಿನ್ಸಿಪಾಲರು ಎಲ್ಲಾ ಅಧ್ಯಾಪಕರ ಜರೂರು ಸಭೆ ಕರೆದರು. ಸಮಸ್ಯೆಗೆ ಬೇರೆ ರೀತಿಯ ಪರಿಹಾರ ಸೂಚಿಸಲು ಕೇಳಿದರು. ಇನಿಷಯಲ್ ತಾಪತ್ರಯವೇ ಬೇಡ, ಹೆಸರಿನ ಮೊದಲ ಕನ್ನಡ ಅಕ್ಷರವನ್ನು ವೇಳಾ ಪತ್ರಿಕೆಯಲ್ಲಿ ತೋರಿಸಬಹುದು ಎನ್ನುವ ಸೂಚನೆಗೆ ಹಿಸ್ಟರಿಯ ಮಂಜುನಾಥ ಹಾಗೂ ಹಿಂದಿಯ ಪಂಕಜನಿಂದ ವಿರೋಧ ಬಂತು. 'ಈ ಗುಂ–ಬಂ ಗಲಾಟೆ ಇಲ್ಲಿಗೂ ತರಬೇಡಿ ಎಂದು ನಿರ್ಧಾರವಾಗಿ ಹೇಳಿದರು.

ಮೊದಲ ಒಂದು ಅಕ್ಷರದ ಬದಲು ಎರಡು ಅಕ್ಷರ ಇರಲಿ ಎನ್ನುವ ತಿದ್ದುಪಡಿ ಬರುತ್ತಿರುವಾಗಲೇ 'ಯಾರ್ರೀ ಹಾಗೆಂದವರು' ಎಂದು ಮಂಗಳಮ್ಮ ಎದ್ದು ನಿಂತಾಗ ಸೂಚಕರು ತಮ್ಮ ಪಕ್ಕದವರ ಹಿಂದೆ ಅವಿತುಕೊಳ್ಳಬೇಕಾಯಿತು. ಹೆಸರಿನ ಮೊದಲ ಮೂರು ಇಂಗ್ಲೀಷ್ ಅಕ್ಷರಗಳನ್ನು ತೋರಿಸಬಹುದೆಂಬ ಸೂಚನೆಯನ್ನು ಗುರುಸ್ವಾಮಿ (ಗುರ್–ಬೆಲ್ಲ), ರಾಮನಾಥ (ರ್‍ಯಾಂ–ಟಗರು) ಉಗ್ರವಾಗಿ ವಿರೋಧಿಸಿದರು.

ಪ್ರಿನ್ಸಿಪಾಲರು ಶಾಲೆಗೆ ಬರಬೇಕಾದ ಪೇಪರ್‌ಗಳನ್ನು ಮನೆಯಲ್ಲೇ ಇಟ್ಟು ಕೊಂಡು ಓದುತ್ತಾರೆ. ಆಡಳಿತದ ಮುಖ್ಯ ಸಮಸ್ಯೆಗಳನ್ನು ಪ್ರಧಾನ ಮಂತ್ರಿಗಳು, ಮುಖ್ಯಮಂತ್ರಿಗಳು, ಹೇಗೆ ಬಿಡಿಸುತ್ತಿದ್ದಾರೆ ಎನ್ನುವುದನ್ನು ನೋಡಿದ್ದಾರೆ. ಓಗೆ 'ಕೆಲವಂ ಮಾಳ್ಪವರಿಂದ ಕಂಡು' ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅಧ್ಯಾಪಕರ ಉಪಸಮಿತಿಯನ್ನು ನೇಮಿಸಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡರು. ತುಂಬಾ ಅನುಭವದ ಕನ್ನಡ ಪಂಡಿತರು ಪಕ್ಕದಲ್ಲಿದ್ದವರ ಕಿವಿಯಲ್ಲಿ ಹೇಳಿದಂತೆ ಈ ಸಮಿತಿ ವರದಿ ಬರುವ ಹೊತ್ತಿಗೆ ವಿದ್ಯಾರ್ಥಿಗಳೇ ಎಲ್ಲಾ ಮೇಸ್ಟ್ರುಗಳಿಗೂ ಸರಿಯಾದ ಹೆಸರನ್ನು ಇಟ್ಟಿರಬಹುದು.

ಪುಢಾರಿ–ಗೆ **ಕಪಟಕವಿ**

ನಿನ್ನಯ ಕುತಂತ್ರಕೆ ಇಹುದೆ ಎಲ್ಲೆ ?
ಇಲ್ಲ, ನಾ ಬಲ್ಲೆ.

ಎಂಥ ಅಡಚಣೆ ಇರಲಿ,
ಕಾನೂನು ಭಯ ಬರಲಿ,
ಎಲ್ಲವನು ನಸುನಗುತ
ಬದಿಗೊತ್ತ ಬಲ್ಲೆ. ೧

ಚಾಚುತಿಹ ಹಸ್ತಗಳು
ಜಡ್ಡಾದ ಫೈಲುಗಳು
ನಿದ್ದೆಯಲಿ ಮುಳುಗಿರುವ
ಸಾಲು ಸಿಬ್ಬಂದಿಗಳು. ೨

ಕಿಸೆಗಳನು ತುಂಬುತ್ತ
ಸವಿಮಾತನಾಡುತ್ತಾ,
ನವನೀತ ಸವರುತ್ತ
ಸ್ವಾರ್ಥ ನಿರತ ! ೩

ನಿನ್ನ ಕುತಂತ್ರಕೆ ಇಹುದೆ ಎಲ್ಲೆ ?
ಇಲ್ಲ, ನಾ ಬಲ್ಲೆ.

(ಕುವೆಂಪು ಅವರ ಕ್ಷಮೆ ಬೇಡಿ)

ಕೈಲಾಸಂ ಇದ್ದಿದ್ದರೆ ಅವರಿಗೆ ನೂರು ವರ್ಷ ತುಂಬಿರುತ್ತಿತ್ತು. ಅವರು ನಮ್ಮನ್ನಗಲಿ ಇಂದಿಗೆ ಮುವತ್ತೆಂಟು ವರ್ಷಗಳಾದವು. ಅವರ ನಿಕಟ ವರ್ತಿಗಳು ಬಹುಪಾಲು ಈಗಿಲ್ಲ. ಆದರೆ ಕೈಲಾಸಂ ಅವರು ಸೃಷ್ಟಿಸಿದ ಸಾಹಿತ್ಯ ಮತ್ತು ಅವರ ಬಗ್ಗೆ ಅವರೊಡನೆ ಒಡನಾಡಿದವರು ಬರೆದ ಸಾಹಿತ್ಯ ಸಾಕಷ್ಟಿವೆ.

KAILASAM AND I ಕಥನದಲ್ಲಿ ರಾಶಿಯವರು ಕೈಲಾಸಂ ಅವರ ಒಂದು ಅಸಾಧಾರಣ ಚಿಂತನೆ ವರ್ಣಿಸಿದ್ದಾರೆ. ಜೀವನದ ಸುಖ ದುಃಖಗಳ ಬಗ್ಗೆ ಸಮದರ್ಶಿಯಾಗಿರುತ್ತಿದ್ದ ಕೈಲಾಸಂ, ಒಮ್ಮೆ ಅನಿವಾರ್ಯವಾಗಿ, ಮರಣಶಯ್ಯೆಯಲ್ಲಿದ್ದ ತಮ್ಮ ಒಬ್ಬ ಬಂಧುವನ್ನು ಭೇಟಿ ಮಾಡಬೇಕಾಯ್ತು. ಆ ದೃಶ್ಯ ಚಿಂತಾಜನಕವಾಗಿತ್ತು. ಮರಣಾವಸ್ಥೆಯಲ್ಲಿದ್ದ ಬಂಧುವೂ ಕೈಲಾಸಂ ಅವರನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತುಬಿಟ್ಟರು.


ಭೇಟಿ ಮುಗಿಯಿತು. ಆಕ್ಷೇದಲ್ಲಿ ಕೈಲಾಸಂ ಅವರು ಮಾರ್ಕಂಡೇಯನ ಬಗ್ಗೆ ಚಿಂತಿಸತೊಡಗಿದರು.

"ಶಿವರಾಂ ಸಾಯಲು ಜನ ಅಂಜುವರಲ್ಲಾ–ಇದಕ್ಕಿಂತ ಹುಚ್ಚೇನಿದೆ ? ನಮ್ಮ ಪುರಾಣಗಳಲ್ಲಿ ಕೂಡ ಮೃತ್ಯುಂಜಯತ್ವಕ್ಕೆ ಏಕಷ್ಟು ಪ್ರಾಮುಖ್ಯತೆ ಕೊಟ್ಟಿದ್ದಾರೆ? ಆ ಮಾರ್ಕಂಡೇಯನ ವಿಚಾರ ತಕೋ– ಅವನು ಸಾಧಿಸಿದ್ದೇನು? ತನ್ನ ಹದಿನಾರನೇ ವಯಸ್ಸಿನಲ್ಲಿ ತನಗೆ ಸಾವು ಎಂದು ತಿಳಿದ ತಕ್ಷಣ ಭಯ ಪಟ್ಟು ಓಡಿ ಶಿವನ ಲಿಂಗ ತಬ್ಬಿಕೊಂಡ. ಕಾಲಕ್ಕೆ ಸರಿಯಾಗಿ ಯಮ ತನ್ನ ಡ್ಯೂಟಿ ಮುಗಿಸಲು ಬಂದು ಶಿವನನ್ನು ತಬ್ಬಿಕೊಂಡಿದ್ದ ಮಾರ್ಕಂಡೇಯನಿಗೆ ಪಾಶ ಹಾಕಿದ. ಮಾರ್ಕಂಡೇಯ ಹೆದರಿ – 'ಅಯ್ಯೋ ಈಶ್ವರಾ–ಯಮನಿಂದ ನನ್ನನ್ನು ಕಾಪಾಡು ಕಾಪಾಡು' ಅಂತ ಬಡಕೊಂಡ. ಈಶ್ವರ–ದಯಮಯ ಭಕ್ತರ ದೈವ. ಅಯ್ಯೋ ಹುಚ್ಚು ಹುಡುಗ–ಎಂಥಾ ಫಿರಕೀನೋ ನೀನು–ಮರಣಕ್ಕೆ ಹೆದರಿ ಓಡಿ ಬಂದಿದ್ದಿ ! ಥೀ–ಹೋಗು–ಚಿರಂಜೀವಿಯಾಗಿ ಅವಸ್ಥೆ ಪಡು ಹೋಗು ಅಂದುಬಿಟ್ಟ.

"ಮಾರ್ಕಂಡೇಯ ಚಿರಂಜೀವಿಯಾದ, ಆದರೆ ಸುಖಪಟ್ಟನೇ? ಅವನ ತಂದೆ ಮೃಕಂಡು ಸತ್ತ, ತಾಯಿ ಸತ್ತಳು, ತನ್ನ ಆಶ್ರಮದ ಸಹಪಾಟಿಗಳೆಲ್ಲಾ ಹೋದರು, ಅವನೊಂದಿಗೆ ಆಟವಾಡಿದ ಪ್ರಾಣಿ ಪಕ್ಷಿಗಳೆಲ್ಲಾ ಹೋದವು. ಆಶ್ರಮವೂ ಹೋಯ್ತು. ಮಾರ್ಕಂಡೇಯ ಇದ್ದೇ ಇದ್ದಾನೆ. ಏನೂ ಮಾಡೋಕೆ ತೋಚದೆ ಯಾತ್ರೆ ಹೊರಟ. ಅನೇಕ ವರ್ಷಗಳು ಅಲೆದಾಡಿದ. ಶತಮಾನಗಳು ಕಳೆದವು.

ಮಾರ್ಕಂಡೇಯ ಇದ್ದೇ ಇದ್ದಾನೆ. ಯುಗಗಳು ಕಳೆಯುತ್ತವೆ. ಮಾರ್ಕಂಡೇಯನಿಗೆ ತಿಳಿದಿದ್ದ ಹಿಮಾಲಯ ಭಾರತ ವರ್ಷ–ಬದಲಾಗಿ ಬಿಟ್ಟಿವೆ. ಎಲ್ಲಾ ಹೊಸತು– ತಾನು ಯಾರಿಗೂ ಬೇಡ. ಶಿವನಿಂದ ತಾನು ಪಡೆದ ವರವೇ ಮಾರ್ಕಂಡೇಯನಿಗೆ ಶಾಪವಾಗಿದೆ. ತನ್ನ ದುರದೃಷ್ಟಕ್ಕೆ–ಅಯ್ಯೋ ನನಗೆ ಸಾವು ಬರಬಾರದೇ!– ಅಂತ ಗೋಳಾಡುತ್ತಾನೆ–ಚಿರಂಜೀವಿ. ”

ಕೈಲಾಸಂ ಅವರು ಈ ಮಾರ್ಕಂಡೇಯ ಪ್ರಸಂಗವನ್ನು ನಾಟಕ ರೂಪಕ್ಕಿಳಿಸ ಬೇಕೆಂದಿದ್ದರಂತೆ. ಎಂತಹ ಉನ್ನತವಾದ ಸಾಹಿತ್ಯವಾಗುತ್ತಿತ್ತು?. ನಮಗೆ ಲಭ್ಯ ವಿಲ್ಲ–ಎಂದು ಹೇಳಿದ್ದಾರೆ – ರಾ. ಶಿ.



19

ಕೀಟಗಳ ಬಗ್ಗೆ ಉಪನ್ಯಾಸ ರಾನಿ.

ಕೀಟ ತಜ್ಞರೊಬ್ಬರಿಂದ ಕೀಟಗಳ ಬಗ್ಗೆ ಉಪನ್ಯಾಸವಿದೆ ಎಂದು ಕೇಳಿದಾಗ ಕಿವಿ ನಿಮಿರಿತು.

ಆಹಾರ ಏನೇ ಇರಲಿ, ಒಗ್ಗರಣೆ ಗಡದ್ದಾಗಿರಲಿ ಎಂದು ನೆಟ್ಟಿದ್ದ ಕರಿಬೇವಿನ ಸಸಿಯ ಎಲೆಗಳನ್ನು ಯಾವುದೋ ಒಂದು ಕೀಟ ಬಂದು ತಿಂದು ಹಾಕುತ್ತಿತ್ತು. ಯಾವ ಕೀಟ ಅಂತ ಸುಳಿವು ದೊರೆತರೂ ದೊರೆಯಬಹುದೆಂಬ ಆಸೆಯಿಂದ ಕೀಟಗಳ ಕುರಿತಾದ ಉಪನ್ಯಾಸಕ್ಕೆ ಕಿವಿಗೊಡೋದಕ್ಕೆ ಹೊರಟೆ.

ಆ ದತ್ತಿ ಉಪನ್ಯಾಸ ಏರ್ಪಡಿಸಿದ್ದು ದಿವಂಗತ ಕಿಟ್ಟಪ್ಪಯ್ಯನ ಮಗಂದಿರು. ಕಿಟ್ಟಪ್ಪಯ್ಯನಿಗೋ ಕೀಟಗಳೆಂದರೆ ಭಯ. ಅವನ ಹತ್ತೆಕರೆ ಭತ್ತದ ಪೈರನ್ನು ಯಾವುದೋ ಕೀಟಗಳು ಬಂದು ನಿರ್ನಾಮ ಮಾಡಿದ ಮೇಲೆ ಕಿಟ್ಟಪ್ಪಯ್ಯನಿಗೆ ಕೀಟೊ ಫೋಬಿಯಾ'ವೇ ತಗಲಿತು. ಕೊನೆಗೆ ಅದರಿಂದಲೇ ಸತ್ತ ಆತ. ಆತನ ಆತ್ಮಕ್ಕೆ ತೃಪ್ತಿಯಾಗುವಂತೆ ಮಕ್ಕಳು ವರ್ಷವರ್ಷವೂ ತಜ್ಞರಿಂದ ಕೀಟಗಳ ಕುರಿತು ಉಪನ್ಯಾಸ ಕೊಡಿಸುವುದಕ್ಕಾಗಿ ನಮ್ಮ ಕಾಲೇಜಿನಲ್ಲಿ ದತ್ತಿ ಏರ್ಪಡಿಸಿದರು.

ಎಷ್ಟಾದರೂ ಕೀಟಗಳೆಂದರೆ ಚಿಕಣಿ ಬಾಬ್ತುಗಳೇ ತಾನೆ ?. ಆದ್ದರಿಂದ ಕೇವಲ ಇನ್ನೂರು ರೂಪಾಯಿ ದತ್ತಿ ನಿಧಿ ಸಾಕೆಂದು ಕಿಟ್ಟಪ್ಪಯ್ಯ ಸುತರು ಮೊದಲು ಭಾವಿಸಿದರೂ ಆ ನಿಧಿ ಕಿಟ್ಟಪ್ಪಯ್ಯ ಅಥವಾ ಕೀಟಗಳ ಬಗ್ಗೆ ಮೌನ ಪ್ರಾರ್ಥನೆ ನಡೆಸಲು ಮಾತ್ರ ಸಾಕೆಂದು ಕಾಲೇಜಿನವರು ನಿರ್ಧರಿಸಿದ್ದರಿಂದ ಒಂದು ಸೊನ್ನೆ ಜಾಸ್ತಿ ಮಾಡಿ ದತ್ತಿ ನಿಧಿಯನ್ನು ಎರಡು ಸಾವಿರಕ್ಕೆ ಏರಿಸಿದರು. ಆ ವಿಚಾರ ಬಿಡಿ.

ಕೀಟಗಳ ಕುರಿತು ತಜ್ಞರ ಉಪನ್ಯಾಸವೇನೋ ಚೆನ್ನಾಗಿತ್ತು. ಉಪನ್ಯಾಸ ಮುಗಿಯುವ ಹೊತ್ತಿಗೆ ವಿಜ್ಞಾನ ಸಂಘದ ಕಾರ್ಯದರ್ಶಿ ಬಲವಾಗಿ ಚಪ್ಪಾಳೆ ಹೊಡೆದಿದ್ದರಿಂದ ಒಳ್ಳೆಯದೇ ಆಯಿತು ಎಲ್ಲರೂ ಎಚ್ಚೆತ್ತು ಬಲವಾಗಿ ಚಪ್ಪಾಳೆ ಹೊಡೆದರು. ಕರಿಬೇವಿನ ಸೊಪ್ಪು ಕಬಳಿಸುವ ಕೀಟದ ಬಗ್ಗೆ ಅವರೇನೂ ಹೇಳಿದ ಹಾಗೆ ಕಾಣಲಿಲ್ಲ. ಪ್ರಶ್ನೋತ್ತರ ಕಾರ್ಯಕ್ರಮವಿದ್ದುದರಿಂದ ಆ ವೇಳೆ ಕೇಳಿ ತಿಳಿದುಕೊಂಡರಾಯಿತು ಎಂದುಕೊಂಡ.

ತಜ್ಞರ ಉಪನ್ಯಾಸವಾದ ಮೇಲೆ ಅಧ್ಯಕ್ಷತೆ ವಹಿಸಿದ್ದ ಗುರೂಜಿಯ ಉಪನ್ಯಾಸ. ಆಮೇಲೆ ಪ್ರಶ್ನೋತ್ತರ ಅಂತ ಸೆಕ್ರೆಟ್ರಿ ಘೋಷಿಸಿದ. ಯಾಕೆಂದರೆ ಗುರೂಜಿಗೆ ಭಜನೆಗೆ ಹೊತ್ತಾಗುತ್ತೆ ಅಂತ ಕೂಡ ವಿವರಿಸಿದ. ಒಳ್ಳೆಯದೇ ಆಯಿತು

ಎಂದುಕೊಂಡೆ. ಇಲ್ಲದೆ ಹೋದರೆ ಗುರೂಜಿಯು ಎರಡೇ ಮಾತು ಎಂದರೆ ಎರಡು ಮಂಕರಿಯಷ್ಟು ಮಾತೆಂದೇ ಅರ್ಥ. ಆದರಲ್ಲಿಯೂ ಗುರೂಜಿ ಎಲ್ಲಿಯಾದರೂ ಫಿಲಾಸಫಿಯ ಬಗ್ಗೆ ತೊಡಗಿದರೊ ಮುಗಿದೇ ಹೋಯಿತು!. ಸಾಲದ್ದಕ್ಕೆ ಅವರಿಗೆ ಇಂಗ್ಲೀಷಿನಲ್ಲಿ ಮಾತಾಡುವ ಹುಮ್ಮಸ್ಸು ಮೂಡಿತೋ ಕೇಳುವುದಕ್ಕೆ ಬೇಡ. ಸ್ವಾಮಿ ವಿವೇಕನಂದರ ಚಿಕಾಗೋ ಉಪನ್ಯಾಸಕ್ಕಿಂತಲೂ ತನ್ನ ಇಂಗ್ಲೀಷ್ ಉಪನ್ಯಾಸ ಒಂದು ಕೈ ಮೇಲೆ ಎಂಬಂತೆ ಅವರು ಆರ್ಭಟಿಸುತ್ತಿದ್ದರು. ಹಿಂದೊಮ್ಮೆ ತತ್ವಶಾಸ್ತ್ರದ ಬಗ್ಗೆ ಯಾರೋ ಉಪನ್ಯಾಸ ನೀಡಿದಾಗ ಗುರೂಜಿ ಅಧ್ಯಕ್ಷ ಸ್ಥಾನದಿಂದ ತಾಸು ಕೊರೆದಿದ್ದನ್ನು ಕೇಳಿದ್ದೆ.

ಆದರೆ ಇಂದು ಹೇಳಿ ಕೇಳಿ ಕೀಟಗಳ ಕುರಿತು ಉಪನ್ಯಾಸ ಗುರೂಜಿ ಎರಡೇ ಮಾತು ಹೇಳಿ ಭಜನೆಗೆ ಧಾವಿಸುತ್ತಾರೆಂದು ಭಾವಿಸಿದೆ, ಆದರೆ ಹಾಗಾಗಲಿಲ್ಲ.

ಗುರೂಜಿ ಪ್ರಾರಂಭಿಸುವಾಗಲೇಸೋ ಎರಡೇ ಮಾತು ಆಡುತ್ತೇನೆ. ಕೀಟಗಳು ವಿಷಯದಲ್ಲಿ ತನಗೇನೂ ಗೊತ್ತಿಲ್ಲ ಅಂತಲೇ ಪ್ರಾರಂಭಿಸಿದರು, ಆದರೆ ಯಾವ ಸ್ಫೂರ್ತಿ ಅವರಲ್ಲಿ ತುಂಬಿ ಬಂತೊ ಯಾವ ಕೀಟ ತಲೆ ಹೊಕ್ಕಿತೋ! ಕೀಟಗಳ ಕುರಿತು ಒಂದೇ ಸವನೆ ಕೊರೆಯ ತೊಡಗಿದರು.


ದತ್ತಿ ಉಪನ್ಯಾಸ ಏರ್ಪಡಿಸಿದ ದಿವಗಂತ ಕಿಟ್ಟಪ್ಪಯ್ಯನವರಿಗೆ ಹೇಗೋ, ತನಗೂ ಕೀಟಗಳೆಂದರೆ ಭಯ ಅಂತ ತೊಡಗಿದರು. ಬದರಿ ಯಾತ್ರೆಗೆ ಹೋಗಿದ್ದಾಗ ಕಿವಿಯೊಳಗೆ ಕೀಟ ಹೊಕ್ಕು. ತೆಗೆಯಲಿಕ್ಕಾಗದೆ ಅದು ಕಿವಿಯೋಳಗೇ ಮೊಟ್ಟೆ ಇಟ್ಟು ಮರಿ ಮಾಡಿದ ಕಥೆ ಹೇಳಿದರು. ಹೊಟ್ಟೆ ತುಂಬ ನಕ್ಕರು, ಇನ್ನೊಮ್ಮೆ ಭಜನೆ ಬಹಳ ಜೋರಾಗಿ ನಡೆಯುತ್ತಿದ್ದಾಗ, ಭಕ್ತಿ ಉದ್ವೇಗಗಳ ಪರಾಕಾಷ್ಠೆಯಲ್ಲಿದ್ದಾಗ ಪಾಂಡುರಂಗ ವಿಠಲ ಮೊರೆಯುತ್ತಿದ್ದಂತೆ ಕೀಟವೊಂದು ಬಾಯಿಯ ಮೂಲಕ ಪ್ರವೇಶಿಸಿ ಉದರವನ್ನು ಹೊಕ್ಕಾಗಿನ ಅನುಭವವನ್ನೂ ಹೇಳಿದರು. ಮತ್ತೆ ನಕ್ಕರು, ಉಳಿದ ಎಷ್ಟೋ ಕೀಟ ವೃತ್ತಾಂತಗಳನ್ನು ಅವರು ತಮ್ಮದೇ ಆದ ಭರ್ಜರಿ ಇಂಗ್ಲೀಷಿನಲ್ಲಿ ಸಾದರಪಡಿಸಿದ್ದು ನನ್ನ ತಲೆಗೆ ಹೋಗಲಿಲ್ಲ. ಅವರೂ ಇತರರೂ ನಕ್ಕಾಗ ನಾನು ನಕ್ಕೆ, ಇತರರಂತೆ ನಾನು ಚಪ್ಪಾಳೆ ಹೊಡೆದೆ. ಅಧ್ಯಕ್ಷ ಭಾಷಣ ಮುಗಿಯುತ್ತದೋ ಇಲ್ಲವೊ?. ಎಂದು ಎಲ್ಲರೂ ಚಡಪಡಿಸುತ್ತಿರುವಾಗ ಕೀಟದ ಕುರಿತು ಸಂಸ್ಕೃತ ಶ್ಲೋಕವೊಂದನ್ನು ಹೇಳಿ ಗುರೂಜಿ ಭಾಷಣ ಮುಗಿಸಿದರು. ನಾವು ಪ್ರಚಂಡ ಚಪ್ಪಾಳೆ ಕುಟ್ಟಿದೆವು.

ಇನ್ನಾದರೂ ಪ್ರಶ್ನೋತ್ತರ ಪ್ರಾರಂಭವಾದೀತು, ಕರಿಬೇವಿನ ಎಲೆ ಕಬಳಿಸುವ ಕೀಟದ ಬಗ್ಗೆ ಮಾಹಿತಿ ಪಡೆಯಬಹುದು ಎಂದುಕೊಂಡಿದ್ದರೆ ಪ್ರಶ್ನೋತ್ತರ

ನಡೆಸಿಕೊಡಬೇಕಾಗಿದ್ದ ತಜ್ಞರೇ ನಾಪತ್ತೆ. ಗುರೂಜಿಯ ಅಧ್ಯಕ್ಷ ಭಾಷಣ ಆಗು ತ್ತಿದ್ದಂತೆ ಹೇಗೆ ಜಾರಿಕೊಂಡಿದ್ದರೊ!.

ಆ ಬಗ್ಗೆ ಯಾವ ಸಬೂಬನ್ನೂ ಹೇಳದೆ ಸೆಕ್ರೆಟ್ರಿ ವಂದನಾರ್ಪಣೆ ನೀಡಿದ– ನಿಜವಾಗಿಯೂ ಎರಡೇ ಮಾತುಗಳು. ಕಾರ್ಯಕ್ರಮದ ಕೊನೆ ತನಕ ಉಪಸ್ಥಿತರಿದ್ದು ಚೆಂದಗಾಣಿಸಿದ ನಾವು ಮೂರು ಮಂದಿ ಸಭಿಕರನ್ನು ಮನಸಾರೆ ವಂದಿಸಿದ–ಮೂರು ಮೂರು ಸಾರಿ.

ಆ ಹಿಗ್ಗಿನಲ್ಲಿ ಕರಿಬೇವಿನ ಸೊಪ್ಪು ಕಬಳಿಸುವ ಕೀಟದ ಬಗ್ಗೆ ಮಾಹಿತಿ ದೊರೆಯದಿದ್ದುದೂ ಮರೆತುಹೋಯಿತು.



ಕುರ್ಚಿಗಳಿಗೆ ತಗಲು ಹಾಕಿ ಹೋಗಲು ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವವರಿಗೆ ಇಲ್ಲಿ ಕೋಟುಗಳು ಬಾಡಿಗೆ ದೊರೆಯುತ್ತವೆ.

ವಿಶೇಷ ಸೂಚನೆಗಳು:–


೧) ಕೋಟುಗಳಿಗೆ ಒಂದೇ ತೋಳಿರುತ್ತದೆ.

೨) ನೀವು ಕುರ್ಚಿಗಳಿಗೆ ತಗಲಿ ಹಾಕಿ ಹೋದ ಕೋಟುಗಳನ್ನು ಸಂಜೆ ೫ ಘಂಟೆಯ ನಂತರ ನಾವೇ ಹೋಗಿ ತರಲು ದಿನಕ್ಕೆ ರೂ. ೧–೦೦ ಪ್ರತ್ಯೇಕ ಚಾರ್ಜು.

೩) ಕೋಟುಗಳನ್ನು ಬಾಡಿಗೆ ತೆಗೆದುಕೊಂಡವರ ಹೆಸರುಗಳನ್ನು ಗೋಪ್ಯವಾಗಿಡಲಾಗುವುದು.

೪) ನೀವು ನಮ್ಮ ಹತ್ತಿರ ರಜಾ ಚೀಟಿ ಕೊಟ್ಟರೆ–ನಿಮ್ಮ ಸಾಹೇಬರು ಬಂದರೆ ಮಾತ್ರ ಕೊಟ್ಟು ಅವರೇ ಯಥಾ ಪ್ರಕಾರ ಕಛೇರಿಗೆ ಬರದಿದ್ದರೆ ನಿಮ್ಮ ಕುರ್ಚಿಗೆ ಕೋಟು ತಗುಲಿ ಹಾಕಿ ಬರಲು ರೂ. ೨–೦೦ ಪ್ರತ್ಯೇಕ ಚಾರ್ಜು.

ವಿಶೇಷ ರಿಯಾಯಿತಿ :– ಒಂದೇ ವಾರದಲ್ಲಿ ಮೂರು ದಿನ ಅಥವಾ ಹೆಚ್ಚು ನಮ್ಮಿಂದ ಬಾಡಿಗೆ ತೆಗೆದುಕೊಂಡರೆ–ಒಂದು ದಿನದ ಬಾಡಿಗೆಯನ್ನು ಸೋದಿ ಬಿಡಲಾಗುವುದು.



"ಸ್ವಲ್ಪ ಫ್ಯಾನ್ ಹಾಕು, ಕೊಡೆ ಒಣಗಲಿ....'

ಯಾರಿಗೂ ಹೇಳೋಣು ಬ್ಯಾಡ **ಸೋಮಿ.**

—೧—

ಕೃಷಿ ರಾಷ್ಟ್ರದ ಬದುಕಿನ ಬೆನ್ನೆಲುಬು. ನಿಜ ಯಾರಿಗೆ ಗೊತ್ತಿಲ್ಲ ? ಭಾಷಣಗಳಲ್ಲಿ, ಪುಸ್ತಕಗಳಲ್ಲಿ, ಬಾನುಲಿಯಲ್ಲಿ ಎಲ್ಲೆಲ್ಲೂ ಅದೇ ಸಮಾಚಾರ. ಈ ಬೆನ್ನೆಲುಬಿನ ಕುರಿತು ನಮಗೆ ಸಾಮಾನ್ಯವಾಗಿ ತಿಳಿದಿರುವ ವಿಷಯಗಳು ಇಷ್ಟು.

೧. ಮುಖ್ಯ ಮಂತ್ರಿಗಳ ಕೈಯನ್ನು ಬಲಪಡಿಸಲು ಮಂತ್ರಿ ಮಂಡಲದ ಎಲ್ಲ ಸದಸ್ಯರೂ ರಾಜೀನಾಮೆ ಪತ್ರಗಳನ್ನು ಕೊಟ್ಟಂತೆ, ನೆಲದ ಫಲವತ್ತತೆ (ಕನ್ನಡ ಭಾಷೆಗೆ ಭಯವಾಗಲಿ) ಹೆಚ್ಚಿಸಲು ಸಾರಜನಕ, ರಂಜಕ, ಪೊಟ್ಯಾಷ್‌ಗಳನ್ನು ಕೊಡಬೇಕು.

೨. ತೇವಾಂಶ ಉಳಿಸಿಕೊಳ್ಳಲು ಇಳಿಜಾರಿನಲ್ಲಿ ಅಡ್ಡ ಸಾಲುಗಳನ್ನು ಕಾಶ್ಮೀರ ಮತ್ತು ಆಂಧ್ರಪ್ರದೇಶಗಳಲ್ಲಿ ತೋಡುವಂತೆ ತೋಡಬೇಕು.

ಅನಾವೃಷ್ಟಿಯಿದ್ದರೂ ಒಣ ಬೇಸಾಯಕ್ಕೆ ಇದು ಮುಖ್ಯ. ಮಳೆಯೇ ಇಲ್ಲದೆ ತೇವಾಂಶವೇ ಇಲ್ಲ, ಇನ್ನು ಉಳಿಸುವುದು ಏನನ್ನು ಎಂಬ ವಿಷಯವನ್ನು ಕೇಳಬಾರದು.

೩. ಎಲ್ಲ ರೈತರೂ ಹದಿನೆಂಟು ಲೀಟರ್ ಪಾತ್ರೆಗಳನ್ನು ಕೊಳ್ಳಬೇಕು. ಏಕೆಂದರೆ ಬೆಳೆಗೆ ಕಂದು ಜಿಗಿ, ಹೇನು, ಸುಳಿ ಪೂಚಿ, ಬಿಳಿಕಸ, ಮಿಡತೆ ಏನು ಬಿದ್ದರೂ ಔಷಧ ಹೊಡೆಯಬೇಕು. ಈ ಔಷಧಿ ಕೆಟಾಸಿಡ್, ಮಿರ್ರ್ಯಾಕಲ್, ಕಾರ್ಬೋರಿಲ್ ಅಥವಾ ಯಾತ್ಯಾತರಿಲ್, ಯಾವುದೇ ಆಗಿರಲಿ ಅದನ್ನು ಹದಿನೆಂಟು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕಾಗುತ್ತದೆ. ಧೂಳೀಕರಿಸುವುದೂ ಆಗಾಗ ಅಗತ್ಯ. ಆದ್ದರಿಂದ ಈ ಪಾತ್ರೆಯಿದ್ದಲ್ಲಿ ಬಹಳ ಅನುಕೂಲ.

ಕರದಿ ಕಪ್ಪರವುಂಟು, ಹಿರಿದೊಂದು ನಾಡುಂಟು ಹರನೆಂಬ ದೈವ ನಮಗುಂಟು ಎಂದು ಜಕ್ಕಸ್ತಾಗಿ ಹೇಳಿಕೊಳ್ಳಬಹುದು.

೪. ಹತ್ತಿ, ಜೋಳ ಮೊದಲಾದ ಖುಷ್ಕಿ ಬೆಳೆಗಳು ಮೊದಲಿಂದ ಕೊನೆಯವರೆಗೂ ಮಳೆಯಿಲ್ಲದೆ ನರಳುತ್ತಿವೆ. ಹತ್ತೆಕರೆ ಹತ್ತಿಗೆ ಒಂಬತ್ತು ಸಾವಿರ ರೂಪಾಯಿ ಖರ್ಚುಮಾಡಿ ಮಳೆ ಬಿಲ್‌ಕುಲ್ ಮಾಯವಾದರೆ ಈ ಔಷಧಿಗಳನ್ನು ರೈತರು ತಮ್ಮ ಮೇಲೆ ಧೂಳೀಕರಿಸಿಕೊಳ್ಳುವ ಅಥವಾ ಸಿಂಪಡಿಸಿಕೊಳ್ಳುವ ಸಂಭವವಿದೆ. ಆದುದರಿಂದ ಮಳೆ ಬೀಳದಿರುವ ಪ್ರದೇಶಗಳಲ್ಲಿ

ಕೀಟ ನಾಶಕಗಳು ಯಾರಿಗೂ ಸಿಗದಂತೆ ಮಾಡಬೇಕು.

೫. ಅತಿ ವೃಷ್ಟಿಯು ಪ್ರದೇಶಗಳಲ್ಲಿ ಮಳೆ ಬೀಳದಂತೆ, ಅಥವಾ ಅದ ರೊಂದಂಶವು ಅನಾವೃಷ್ಟಿ ಪ್ರದೇಶದಲ್ಲಿ ಬೀಳುವಂತೆ ವಿಜ್ಞಾನಿಗಳು ಒಂದು ಆರ್ಡಿನೆನ್ಸ್ ಜಾರಿಗೆ ತರಬೇಕು.

೬. ಮಳೆಗಾಗಿ ಮುಗಿಲು ನೋಡಿ ಕತ್ತು ಹೊಳಕಿರುವ ರೈತರಿಗೆ ಮುಫತ್ ಚಿಕಿತ್ಸಾ ಶಿಬಿರ ಯಾರಾದರೂ ಏರ್ಪಡಿಸಿದ್ದಾರೆಯೇ ? ತಿಳಿಯಬೇಕು. ಕರ್ಮ, ವಿಧಿವಾದಗಳು ಖಂಡನೀಯ ಆದರೆ ನಿಜ–

–೨–

ಒಂದಾನೊಂದು ಪತ್ರಿಕಾವರದಿಯಂತೆ ಸುಮಾರು ಮೂರುವರೆ ಸಾವಿರ ಮೀಸಲಾತಿ ಸೀಟುಗಳಿಗೆ ಒಂದೂವರೆ ಸಾವಿರ ಪರೀಕ್ಷಾ ಅರ್ಹತೆ ಆಧಾರದ ಸೀಟು ಗಳಿಗೆ ಅವಕಾಶ. ತಾಂತ್ರಿಕ ಜನ-ತಂತ್ರ ! ಇನ್ನು ವಿದ್ಯಾರ್ಥಿಗಳು ಅರ್ಹತೆಗಾಗಿ ಯತ್ನಿಸುವರೇ !.

☆ ☆ ☆

ನಾಂದೇಗುಲಕೆ ಬಂದುದೇಕೆ ದಿಟಪೇಳುವೊಡೆ
ದೇವರನು ಧ್ಯಾನಿಸುವ ಮನದಿನೇನಲ್ಲ
ಹಿಂದಿಲ್ಲಿ ಮಿಥುನುಗಳ ಫೋಟೊ ತೆಗೆದಿದ್ದೆನದು
ಕೆಟ್ಟಿತೆಂದೀಗ ತೆಗೆಯಲು ಮತ್ತೆ ಬಂದೆನ್

ಖುದ್ದೂಸ್.

ಮಂದಾರ

ಧಾರಾವಾಹಿ–9. **ರಮ್ಯ.**

[ಇಲ್ಲಿಯವರೆಗೆ– ಯುಗಳ ಗೀತೆಯ ಸ್ಪರ್ಧೆಯಲ್ಲಿ ವಿಜೇತರಾದ ಹ್ಯಾಂಲೆಟ್, ಮಂದಾರ. ಇಬ್ಬರೂ ಬಣವೇಕಲ್ ಕಾಲೇಜನ್ನು ಪ್ರತಿನಿಧಿಸಲು ಪೋಲಾಳ್ವನಗರಕ್ಕೆ ಹೊರಡಲು ಅಣಿಯಾಗಿದ್ದಾರೆ. ಮಂದಾರನ ಜೀವನದಲ್ಲಿ ಇದೊಂದು ಸಂಧಿಕಾಲ. ಅವಳ ಪ್ರೇಮವು ಹ್ಯಾಂಲೆಟ್ ಮತ್ತು ಸಿನಿಮಾಗಳ ನಡುವೆ ಹರಿಹಂಚಾಗಿದೆ. ಮ್ಯಾಕ್ಬೆತ್ ಅವಳಿಗಾಗಿ ಸಿನಿಮಾರಂಗದಲ್ಲಿ ಓಪನಿಂಗ್ ಏರ್ಪಡಿಸಲು ಹೋಗಿ ವಿಫಲನಾಗಿದ್ದಾನೆ. ಇದೀಗ ಒಥೆಲೋ ಮಂದಾರನಿಗೆ ಹೀರೋಯಿನ್ ಹಾಗೂ ಹಿನ್ನಲೆಗಾಯಕಿ ಪಟ್ಟವನ್ನು ಪೋಲಾಳ್ವನಗರದಲ್ಲಿ ನೀಡುವುದಾಗಿ ಮಂದಾರನ ತಂದೆ ಕಿಂಗ್‌ಲಿಯರ್‌ಗೆ ಮಾತು ಕೊಟ್ಟಿದ್ದಾನೆ. ಮಂದಾರ ಅದಕ್ಕೆ ಸಿದ್ಧಳಾಗಿದ್ದಾಳೆ. ಒಮ್ಮೆ ನಾಯಕಿಯಾಗಿಬಿಟ್ಟರೆ ನಂತರ ಹ್ಯಾಂಲೆಟ್‌ನನ್ನು ನಾಯಕನನ್ನಾಗಿ ಮಾಡುವುದು ಸುಲಭ. ಒಂದೇ ಕಲ್ಲಿಗೆ ಜೋಡಿ ಹಕ್ಕಿಗಳು ! ಹ್ಯಾಂಲೆಟ್ ಮಂದಾರನ ಪಾದ ತಲದಲ್ಲಿ ತನ್ನ ಮನವನ್ನಿಟ್ಟು ಎಷ್ಟೋ ದಿನಗಳಾಗಿವೆ. ಪೋಲಾಳ್ವನಗರಕ್ಕೆ ಯಾತ್ರೆಯ ಸಿದ್ಧತೆ ನಡೆದಿವೆ – ಇನ್ನು ಓದಿ]

ಮಂದಾರ ಪೋಲಾಳ್ವನಗರದಲ್ಲಿ ಧರಿಸಲು ಅನೇಕ ಉಡುಪುಗಳನ್ನು ಸಿದ್ಧಗೊಳಿಸಿಕೊಂಡಳು. ಅವುಗಳಲ್ಲಿ ಅವಳ ಮನಸ್ಸಿಗೆ ಬಹಳವಾಗಿ ಒಪ್ಪಿದ್ದು ಪಂಜಾಬಿ ಡ್ರೆಸ್, ರಂಗುರಂಗಿನ ಪ್ರಿಂಟಿನ ಪಾಯಿಜಾಮ, ಖಮೀಜ್, ಪಾರದರ್ಶಕವಾದ ಬಿಳಿಯ ರೇಷ್ಮೆಯನ್ನು ಹಳಿಯುವ ಸಲ್ವಾರ್. ವಿಶೇಷ ಹೂಗಳು.

ಉಳಿದೆಲ್ಲ ಸಿದ್ಧತೆಗಳೂ ಮುಗಿದ ಮೇಲೆ ಹ್ಯಾಂಲೆಟ್ ಚಿಂತೆ ಆರಂಭವಾಯಿತು. ಅವನು ಇಪ್ಪತ್ತುನಾಲ್ಕು ಗಂಟೆಯೂ ರಾಗಗಳನ್ನು ಗುಣುಗುಣಿಸುತ್ತಿರುತ್ತಾನೆ. ಒಳ್ಳೆಯ ಬಟ್ಟೆಗಳೇನೋ ಇವೆ. ಆದರೆ ಇಸ್ತ್ರಿ ಮಾಡಿಸುವ ಮನಸ್ಸಿಲ್ಲ. ಅವನಿಗೆ ಸ್ವರ್ಗವೇನೋಬೇಕು. ಅದರೆ ಯಾಗ ಮಾಡಲು ಸಿದ್ಧನಿಲ್ಲ. ಹಸುಳೆ ಮನಸ್ಸಿನವ, ಪ್ರೇಮವೊಂದೇ ಅವನ ಆಸ್ತಿ. ಪ್ರೇಯಸಿಗಾಗಿ ಮಧುರ ರಾಗವನ್ನೂ, ಪ್ರೇಮಸ್ನಿಗ್ಧವಾದ ಮನಸ್ಸನ್ನೂ ಕೊಡಬಲ್ಲ. ಇನ್ನೇತರ ಚಿಂತೆಯೂ ಅವನಿಗಿಲ್ಲ.

ಮಂದಾರ ಪ್ರೀತಿಸಿದ್ದು ಅವನನ್ನೇ, ಲಕ್ಷಗಳ ಮಾತಾಡುವ ಕ್ರೂರಿ ಮ್ಯಾಕ್‌ಬೆತ್, ತನ್ನ ಪಾರ್ಟ್‌ನರನ್ನು ತ್ಯಜಿಸಿ, ಮತ್ತೊಬ್ಬಳ ಮೇಲೆ ಕಣ್ಣಿಟ್ಟ ಒಥೆಲೋ

ಅವಳಿಗೆ ಕಂಚಿತ್ತೂ ಒಪ್ಪಿಗೆ ಇಲ್ಲ. ಆದರೆ ಸಿನಿಮಾತಾರಾಗಿರಿ ಅವಳನ್ನು ಅಯಸ್ಕಾಂತದಂತೆ ಆಕರ್ಷಿಸುತ್ತಿತ್ತು. ಕಿಂಗ್‌ಲಿಯರ್ ತನಗೆ ಹೇಳುತ್ತಿದ್ದುದು Stardom ಬಗ್ಗೆ ಮಾತ್ರ, ಒನ್ನಲಿ ಗಾಯಕಿಯ ಪಟ್ಟ Next best bet. ಹ್ಯಾಂಲೆಟ್ಟಿನ ಬೆಂಬಲವಿಲ್ಲದೆ ಗಾಯಕಿಯಾಗುವುದು ಕನಸು. ಅದಕ್ಕಾಗಿ ಸ್ಪರ್ಧೆ. ಆದರೆ ತಾರಾಗಿರಿ ತಾನಾಗಿಯೇ (ಒಥೆಲೋ ಸಹಾಯದಿಂದ) ದಕ್ಕುವಂತಿದ್ದರೆ ಅದನ್ನೇ ಏಕೆ ಪಡೆಯಬಾರದು?

ತನಗೆ ಬೇಕಾದುದು ತಾರಾಗಿರಿಯೋ, ಹ್ಯಾಂಲೆಟ್ಟೋ? ಮಂದಾರ ಈ ಪ್ರಶ್ನೆಗೆ ಉತ್ತರ ಹುಡುಕಲು ನಿಶ್ಚಿತ ಪ್ರಯತ್ನ ಮಾಡಲಿಲ್ಲ. ತನ್ನ ಆಲೋಚನೆಗೆ ಸ್ಪಷ್ಟ ರೂಪಕೊಡಲು ಅವಳು ಚಿಂತಿಸಲೇ ಇಲ್ಲ. ಹ್ಯಾಂಲೆಟ್ ತನ್ನ ಜೀವನದ ಸಂಗಾತಿಯೆಂಬ ಅವಳ ನಿರ್ಧಾರ ಅಚಲವಾಗಿತ್ತು. ಜೀವನದ ಸ್ವರೂಪವೇನೆಂದು ಯಾರು ಬಲ್ಲರು ? ಎಷ್ಟು ಜನ ಅದರ ನಿಶ್ಚಿತ ರೂಪವನ್ನು ಕುರಿತು ಲೆಕ್ಕ ಹಾಕುತ್ತಾರೆ ? ಯಾರ ಲೆಕ್ಕಾಚಾರದಂತೆ ಜೀವನ ರೂಪಿತವಾಗುತ್ತದೆ ?

ಪೋಲಾಳ್ವನಗರದ ಪ್ರವಾಸ ಇನ್ನೆರಡು ದಿನ ಇದ್ದಂತೆ ಮಂದಾರ ಒಂದು ಯೋಜನೆ ಹಾಕಿದಳು. ಅಲ್ಲಿರುವ ಎರಡು ದಿನ ಹೋಟೆಲಿನ ತಿಂಡಿಗಳನ್ನೇ ತಿನ್ನದೆ ಹಿಂದಿನ ಕಾಲದವರಂತೆ ಏಕೆ ತಿಂಡಿ ಮಾಡಿಕೊಂಡು ಹೋಗಬಾರದು? ಪ್ರಭಾ ಜೊತೆಗೆ ಚಕ್ಕಲಿ ಮೈಸೂರುಪಾಕು, ಕೋಡಬಳೆ ಮಾಡಲು ನಿರ್ಧರಿಸಿದಳು. ಪೂರ್ವಿಕರ ತಿಂಡಿಗಳನ್ನು ಬಿಟ್ಟರೆ ಇಲ್ಲ. ಪ್ರಭಾನ ತಾಯಿ ಒಂದು ದಿನ ಕೊಟ್ಟ ಮೈಸೂರುಪಾಕ ಬಾಯಲ್ಲಿ ಕರಗಿ ಹೋಗಿತ್ತು. ರುಚಿ ಮಾತ್ರ ನೆನಪಿನಲ್ಲಿ ಬೆಳೆಯುತ್ತಲೇ ಇತ್ತು. ಪ್ರಭಾ ತನ್ನ ತಾಯಿಯಿಂದ ಮೈಸೂರುಪಾಕ ವಿಧಾನ ತಿಳಿದುಕೊಂಡು ಬಂದಳು.

" ಮಂದ, ಅದೇನು ಪೆರಿ ಈಸಿ, ಮೊದಲು ತುಪ್ಪಹಾಕಿ ಹಿಟ್ಟು ಹುರಿದು, ಸಮ ಸಮ ಸಕ್ಕರೆ ಹಾಕಿ ಪಾಕ ಮಾಡಿ..................."

" ಸಮ ಸಮ ಅಂದ್ರೇನೇ "

" ಈಕ್ವಲ್ ಈಕ್ವಲ್, ಅಷ್ಟು ತಿಳಿಯೋದಿಲ್ಲೇ, ಅದಕ್ಕೆ ಹಿಟ್ಟುಹಾಕಿ ಕೈಯಾಡೋದು. ಸ್ವಲ್ಪ ಕುದಿಸಿ ಸಮ ಸಮ ತುಪ್ಪ ಹಾಕ್ತಾ ಕೈಯಾಡಿ........"
" ಅಂದ್ರೆ ಈಕ್ವಲ್ ಈಕ್ವಲ್ ತುಪ್ಪ ಅನ್ನು ...."
" ರೈಟ್, ಪೊಳ್ಳು ಪೊಳ್ಳು ಬರ್‍ತಿದ್ದಾಗೆ
ಕೈಯಾಡಿ..........."
" ಅಯ್ಯೋ ಅದೇನ್ಮಹಾ..........."

ಈಗ ಉಳಿದದ್ದು ಮೈಸೂರುಪಾಕು ಮಾಡೋದು. ಯಾವ ಹಿಟ್ಟು ಹುರಿ ಬೇಕು ಎಂದು ದೊಡ್ಡ ಚರ್ಚೆ ಆರಂಭವಾಯಿತು. ಕಿಂಗ್‌ಲಿಯರ್ ಅವರ ಸಹಾಯ ಕ್ಕೆ ಬಂದ. ಹೋಟೆಲಿಗೆ ಹೋಗಿ ಕಡ್ಲೆ ಹಿಟ್ಟು ಎಂದು ತಿಳಿದುಕೊಂಡು ಬಂದ.

ಕಡ್ಲೆ ಹಿಟ್ಟು ಹುರಿಯುವುದಕ್ಕೆ ಈಕ್ವಲ್ ಈಕ್ವಲ್ ತುಪ್ಪ ಹಾಕಬೇಕೇ, ಎಷ್ಟು ಹೊತ್ತು ಹುರಿಯಬೇಕು ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕಾಮನ್ ಸೆನ್ಸಿ ನಿಂದ ಕಂಡುಹಿಡಿದುಕೊಂಡು ಕಬ್ಬಿಣದ ಬಾಂಡಲಿಯಲ್ಲಿ ಮಂದಾರ ಕೈಯಾಡುತ್ತಿ ದ್ದಳು. ಪ್ರಭಾ, ತುಪ್ಪವನ್ನು ಆಗಾಗ ಹಾಕುತ್ತಾ ಬಾಂಡಲಿಯಲ್ಲಿ ಬಾಗಿ ನೋಡು ತ್ತಿದ್ದಳು. ತಲೆಗೆ ಚುಚ್ಚುಗ ಬಡಿಯುತ್ತಿದ್ದರೂ, ಏಕಾಗ್ರ ಚಿತ್ತದಿಂದ ನೋಡುತ್ತಿ ದ್ದಳು. ಹೀಗೆ ಹಲವು ಕಾಲವಾದ ಮೇಲೆ ಕಂದು ಬಣ್ಣದ ಮುದ್ದೆಯ ಹಿಟ್ಟು ತಯಾರಾಯಿತು. ಅದನ್ನು ಸ್ಟೀಲ್ ಪ್ಲೇಟಿನಲ್ಲಿ ಹಾಕಲು ಸಿದ್ಧತೆ ನಡೆಸುತ್ತಿರುವಾ ಗಲೇ ಸೀದವಾಸನೆ ಬಂದಿತು.

ಅವಸರದಿಂದ, ಬಾಂಡಲಿಯನ್ನು ಕೆಳಗಿಳಿಸಿ ಚುಚ್ಚುಗದಿಂದ ಪಾಕವನ್ನು ತಟ್ಟೆಗೆ ಎಬ್ಬಿ ಕುಟ್ಟಿ ಚುಚ್ಚಿ ಸಮತಲಮಾಡಿದ್ದಾಯಿತು. ಸ್ವಲ್ಪ ಹೊತ್ತಿನಲ್ಲೇ, ಕಂದು ಬಣ್ಣದ ಪಾಕ ಕಪ್ಪಿಗೆ ತಿರುಗಲಾರಂಭಿಸಿತು.

ಪ್ರಭಾ ಹೇಳಿದಳು " ಲೇ, ಮಂದ ನೋಡಿದೆಯೋನೇ ಕಲರ್. ನನ್ನ ಮುಖದ ತರಹ ಆಗ್ತಾ ಇದೆ. " ಮಂದಾರ ಅದನ್ನು ಗಮನಿಸದೆ " ಟೆಂಪರೇಚರ್ ಕಡಿಮೆ ಆಯ್ತುಲ್ಲಾ, ಅದಕ್ಕೇ ಸ್ವಲ್ಪ ಕಲರ್ ಫೇಡ್ ಆಗಿದೆ. ಎಂತೆಂಥ ಹೋಟೆಲ ಲ್ಲೋ ಕಪ್ಪು ಬಣ್ಣ ಇರುತ್ತೆ. " ಪ್ರಭಾ ಹೇಳಿದಳು "ಇದೇ ರೇಟ್ನಲ್ಲಿ ಕಲರ್ ಫೇಡ್ ಆಗ್ತಾ ಇದ್ದರೆ, ಇದು ರಮಾನ ಕಲರ್‌ನ ರೀಚ್ ಮಾಡುತ್ತೆ ಅಷ್ಟೇ. "ಪಕ್ಕದ ಮನೆ ಶಶಿಕಲಾನ ಕರೀತಿನಿ ತಾಳು. "

ಮಂದ ಹೇಳಿದಳು "ಪಾಕ್ ಆಯ್ತು. ಶಶಿಕಲಾನ್ನ ಏನುಕರೆಯೋದು ? ಮೊದಲೇ ಜಂಬದಕೋಳಿ. ಈಗ ಒಂದಿಷ್ಟು ಕೋಡಬಳೆ ಮಾಡಬೇಕು. ಹೇಗಿರ ಬೇಕು ಅಂತಿ. ಕರಂ ಕುರುಂ ಅಂತ ಹಲ್ಲಿಗೆ, ನಾಲಿಗೆ ಮೇಲೆ ಕರಗಿಹೋಗಬೇಕು." ಪ್ರಭಾ ಹೇಳಿದಳು "ನಾನು ಮಾಡ್ತೀನಿ. ಅದೇನು ಮಹಾ. ಒಂದಿಷ್ಟು ಅಕ್ಕಿ ಹಿಟ್ಟಿಗೆ ಮೆಣಸಿನ ಪುಡಿ, ಉಪ್ಪು, ಓಮಿನಕಾಳು, ಸೇಂಗಾ ಬೀಜದ ಪುಡಿ ಕಲಸಿ, ಕೋಡ ಬಳೆ ಕರಿದರಾಯ್ತು".

ಒಂದರ್ಧ ಗಂಟೆಯಲ್ಲಿ ಕೋಡಬಳೆ ಕರಿದದ್ದಾಯಿತು. ಮಂದಾರ, ಪ್ರಭಾ ತಿಂಡಿಯ ಗಡಿಬಿಡಿಯಲ್ಲಿರುವಾಗ ಹ್ಯಾಂಲೆಟ್ ಅಲ್ಲಿಗೆ ಬಂದ.

ಮಂದಾರ ಓಡಿ ಹೋಗಿ ಅವನನ್ನು ಕೋಣೆಯಲ್ಲಿ ಕೂಡಿಸಿ ಒಂದು ಪ್ಲೇಟಿನಲ್ಲಿ ಮೈಸೂರುಪಾಕನ್ನೂ ಕೋಡಬಳೆಯನ್ನು ಇಟ್ಟುಕೊಂಡು ಹೋಗಿ " ಶಿವು, ನಿನಗೆ ಅಂತ, ನಾನು, ಮಾಡಿದ್ದೇನೆ ಹೇಗಿದೆ ನೋಡು. ಹೋಟೆಲಿಂದ ತಂದದ್ದಲ್ಲ" ಎಂದಳು. ನೀರು ತರಲು ಅವಳು ಒಳಗೆ ಹೋದಾಗ ಹ್ಯಾಂಲೆಟ್ ಮೈಸೂರು ಪಾಕನ್ನು ಕೈಗೆತ್ತಿಕೊಂಡು ಮುರಿಯಲು ಹೋದ. ಅದು ಜಪ್ಪಯ್ಯ ಅಂದರೂ ಮುರಿಯಲಿಲ್ಲ. ಬಾಯಲ್ಲಿಟ್ಟುಕೊಂಡ ಕಡಿದ. ಹಲ್ಲು ನೋವಾಯಿತೇ ಹೊರತು ಪಾಕ ತುಂಡಾಗಲಿಲ್ಲ. ಕೋಡಬಳೆಯನ್ನು ಕೈಗೆತ್ತಿಕೊಂಡ ಹ್ಯಾಂಲೆಟ್ ಮುರಿಯಲು ಯತ್ನಿಸಿ ಮತ್ತೆ ವಿಫಲನಾದ.

ನೀರು ತರಲು ಹೋದ ಮಂದಾರ ಬರಲೇ ಇಲ್ಲ, ಒಳಗಿನ ಮನೆಯಿಂದ ಅಳು, ಪಿಸು ಪಿಸು, ಕೂಗು ಕೇಳಿ ಬಂದವು, ಮತ್ತೆಲ್ಲ ತಮ್ಮಣಿ.

ಹ್ಯಾಂಲೆಟ್ ಕಿಟಿಕಿಯ ಕದವನ್ನು ತಡೆಯಲು ಇಟ್ಟ ಚಿಕ್ಕ ಕಲ್ಲಿನಿಂದ ಮೈಸೂರು ಪಾಕನ್ನು ಹೊಡೆದ ಆ ಕಲ್ಲು ಟೆನ್ನಿಸ್ ಚಂಡಿನಂತೆ ಹಿಂದಕ್ಕೆ ಪುಟಿಯಿತು. ಅವನು ಹೊರಕ್ಕೆ ಹೋಗಿ ಸಾಕಷ್ಟು ದೊಡ್ಡ ಕಲ್ಲೊಂದನ್ನು ತಂದು ಎತ್ತಿ ಅಪ್ಪಳಿಸಿದ. ಮೈಸೂರು ಪಾಕು ತುಂಡು ತುಂಡಾಗಿ ಸುತ್ತಲೂ ಚಿಮ್ಮಿತು. ಕಲ್ಲನ್ನು ಹೊರಗೆಸೆದು, ತುಂಡುಗಳನ್ನು ಜೋಪಾನವಾಗಿ ಆರಿಸಿ ಬಾಯೊಳಕ್ಕೆ ಹಾಕಿದ. ಕಬ್ಬಿಣದ ಕಡಲೆಗಳನ್ನು ಅಗಿದ ಅನುಭವ ಬಂತು. ಕಿಟಿಕಿಯ ಬಳಿಗೆ ಹೋಗಿ ಅವನ್ನೆಲ್ಲಾ ಉಗುಳಿದ. ನಾಲಗೆಯೆಲ್ಲಾ ಕಿಲುಬು ಸಿಹಿಯಿಂದ ತುಂಬಿತು.

ಮಂದಾರ ಇನ್ನೊಂದು ಪ್ಲೇಟಿನಲ್ಲಿ ಸೊಗಸಾದ ಮೈಸೂರು ಪಾಕು ತಂದು ಕೊಟ್ಟಳು.

"ಶಿವು ಡಿಯರ್, ಎಕ್ಸ್‌ಕ್ಯೂಸ್‌ಮಿ. ನೀನು ಬಂದ ಗಾಬರಿಯಲ್ಲಿ, ಪಕ್ಕದ ಮನೆ ಶಶಿಕಲಾ ಅವರು ಕಳಿಸಿದ್ದ ಮೈಸೂರು ಪಾಕು ತಂದುಕೊಟ್ಟೆ. ಒಳ್ಳೆ ರಮಾನ ಕಲರ್‌ಗಿದೆ. ಸುತ್ತಿಗೆ ಬೇಕು ಪುಡಿ ಮಾಡೋಕೆ. ಸಾರಿ, ಯು ಹ್ಯಾವ್ ಬೀನ್ ಟ್ರಬಲ್ಡ್ "

ಇನ್ನೆರಡು ಪ್ಲೇಟು ತಿಂಡಿ ತೆಗೆದುಕೊಂಡು ಪ್ರಭಾ ಕೋಣೆಗೆ ಬಂದಳು.

ಪೋಲಾಳ್ವನಗರಕ್ಕೆ ಪ್ರಯಾಣ, ಅಲ್ಲಿ ನಡೆಯುವ ಸ್ಪರ್ಧೆಯಲ್ಲಿ ಯಶಸ್ಸು ದೊರೆಯುವ ಸಂಭವ ಇವುಗಳತ್ತ ಮಾತು ಹರಿಯಿತು.

ಪೋಲಾಳ್ವನಗರದ ಸ್ಥಳ ಪುರಾಣ, ಸಾವರ್ಣಿ ಮನ್ವಂತರದಿಂದ ಆರಂಭವಾಗುತ್ತದೆ. ಆ ಪುರಾಣವನ್ನೂ ವೈವಸ್ವತ ಮನ್ವಂತರದ ಹಲವು ಕಲ್ಪಗಳನ್ನೂ

ಬಿಟ್ಟು ಚಾಲ್ತಿ ದ್ವಾಪರಯುಗದ ಕಾಲಕ್ಕೆ ಬಂದರೆ ನಮಗೆ ನಂಬಲರ್ಹವಾದ ಒಂದು ಆಖ್ಯಾನ ಸಿಕ್ಕುತ್ತದೆ. ಭೀಮಸೇನ ದೇವರನ್ನು ಚಂಡಾಳ ಚೌಕಳಿಯುವರು ಫುಡ್ ಪಾಯಿಸನಿಂಗ್‌ಗೆ ಒಳ ಪಡಿಸಿ ಹಸ್ತಿನಾವತಿಯ ಪ್ರಮಾಣ ಕೋಟೆಯಲ್ಲಿ ಪೆಡಮುರಿಗೆ ಕಟ್ಟಿ ಯುಮುನಾ ನದಿಗೆಸೆದರಷ್ಟೆ. ಭೀಮಸೇನ ದೇವರು ಪಾತಾಳದಲ್ಲಿ ಕೆಲಕಾಲ ವಿದ್ದು, ಅಮೃತಪಾನಮಾಡಿ ಹದಿನಾರು ಸಹಸ್ರ ಆನೆಗಳ ಬಲವನ್ನು ಸಂಪಾದಿಸಿ ಭೂಲೋಕಕ್ಕೆ ಹೊರಟರು. ಪಾತಾಳ ಬಿಲದಲ್ಲಿ ಇಲ್ಯೂಮಿನೇಷನ್ ಸಾಲದೆ, ಡೀವಿಯೇಷ್ ಬಿಲದಲ್ಲಿ ನುಗ್ಗಿ ಪೋಲಾಳ್ವನಗರದಲ್ಲಿ ಭೂಪ್ರವೇಶ ಮಾಡಿದರು. ಆಗ ಕವಿಯು. ಈ ನಗರದ ಮಹಿಮೆಯನ್ನು ಹೀಗೆ ವರ್ಣಿಸಿದ್ದಾನೆ. "ಈ ನಗರದ ಜನರು ಅತ್ಯಂತ ಬಲಿಷ್ಠರು. ಹಿಂದೆ ದೇವಾಸುರ ಯುದ್ಧದಲ್ಲಿ ದೇವೇಂದ್ರನಿಂದ ಭಂಗಿತರಾದ ದಾನವ ಶ್ರೇಷ್ಠರೇ ಈ ನಗರದಲ್ಲಿ ಅಹಿರ್ಬುಧ್ನ್ಯಾ ಧೋಕ್ಷಜನ ಭಕ್ತರಾಗಿ ಹುಟ್ಟಿದರು" ರವಿ ಕಾಣದ ಸತ್ಯವಲ್ಲವೇ ಇದು. ಕ್ರಾಂತದರ್ಶಿಯಾದ ಆ ಕವಿಗೆ ನಮನಗಳು.

ಪೋಲಾಳ್ವ ದಂಡನಾಯಕನ ಕಾಲದಲ್ಲಿ ಈ ಊರಿನಲ್ಲಿ ಜಕಣಾಚಾರಿಯು ಒಂದು ರಮ್ಯವಾದ ದೇವಾಲಯವನ್ನು ನಿರ್ಮಿಸಿದನು. ಈ ದೇವಾಲಯವು ಈಗಲೂ ಇದೆ. ಆದರೆ ಅದರ ಸೌಂದರ್ಯವು ವಿಗ್ರಹ ಚೋರರ ಕೈಗೆ ಸಿಕ್ಕು ಲೂಟಿಯಾಗಿ ಹೋಗಿದೆ. ದೇವಾಲಯದ ಮುಂದಿರುವ ಶಾಸನಗಳನ್ನು ಅವರು ಕಳ್ಳತನ ಮಾಡದಿರುವುದರಿಂದ ಪೋಲಾಳ್ವನ ಹೆಸರು ನಮಗೆ ಲಭ್ಯವಾಗಿದೆ. ಇಲ್ಲದಿದ್ದರೆ ವೆಂಕ ನಾಣಿ ಶೀನ ಇವರೆಲ್ಲರೂ ಸೇರಿ ಈ ದೇವಾಲಯದ ಕಾಲವು ಕ್ರಿಸ್ತಪೂರ್ವ ಐದು ಸಾವಿರ ವರ್ಷ ಎಂದು ಪ್ರೂವ್ ಮಾಡಿ ಡಾಕ್ಟರೇಟುಗಳನ್ನು ಗಿಟ್ಟಿಸುತ್ತಿದ್ದರು.

ದೇವಾಲಯದಿಂದ ಸುಮಾರು ಆರುನೂರು ಮೀಟರ್ ದೂರದಲ್ಲಿ ಪಾವನ ಗಂಗಾ ನದಿಯು ಹರಿಯುತ್ತದೆ.

ಪಾವನಗಂಗೆಗೆ, ಹರಿದ್ರಾ ನದಿಯು ಸೇರುವ ಸಂಗಮ ಸ್ಥಳವೂ ಅಲ್ಲಿದೆ. ಕೆಲವೇ ವರ್ಷಗಳ ಹಿಂದೆ ನದಿಯ ಎರಡು ದಡಗಳಲ್ಲೂ ಮಾವಿನ ತೋಪುಗಳಿದ್ದವು. ಮಲ್ಲಿಗೆ, ಸಂಪಿಗೆ, ಬಕುಳ, ಪಾರಿಜಾತ ಪುಷ್ಪಗಳ ಸುಗಂಧದಿಂದ ಇಡೀ ಪ್ರಾಂತವೇ ಸುಗಂಧ ಪೂರಿತವಾಗಿತ್ತು. ನದಿಯ ಸ್ನಾನ ಘಟ್ಟಗಳಲ್ಲಿ ನರನಾರಿಯರು ಮಿಂದು, ಭಗವಂತನ ದರ್ಶನಕ್ಕೆ ಬರುತ್ತಿದ್ದರು. ಈಗ ಸ್ನಾನ ಘಟ್ಟಗಳ ಕಲ್ಲುಗಳು ಊರಿನ ಮುಖಂಡರ ಮನೆಗಳ ತಳಪಾಯ ಸೇರಿವೆ. ಮಾವಿನ ಮರಗಳು ಮಾಯವಾಗಿವೆ. ನದಿಯ ನೀರು ಚಿಕ್ಕಚರಂಡಿ ನೀರಾಗಿದೆ.

ನದಿಯ ಆಚೆಯ ದಡದಲ್ಲಿ ಹಲವಾರು ಸಹಸ್ರ ಮರಗಳನ್ನು ಕಡಿದು ಪೋಲಾಳ್ವ ಯೂನಿವರ್ಸಿಟಿ ಕ್ಯಾಂಪಸ್ಸನ್ನು ಕಟ್ಟಿದ್ದಾರೆ. ಈ ಕ್ಯಾಂಪಸ್ಸಿನಿಂದ ಎರಡು ಕಿಲೋಮೀಟರ್ ದೂರದಲ್ಲಿ ಊರಿಗೆ ಹತ್ತಿರವೇ ಹಲವಾರು ಕಬ್ಬಿಣ, ಮ್ಯಾಂಗನೀಸ್, ಕಾಟನ್, ಪಾಲಿಯೆಸ್ಟರ್ ಕಾರ್ಖಾನೆಗಳು ತಲೆಯೆತ್ತಿವೆ. ಪೋಲಾಳ್ವನಗರದ ಇಕ್ಕಟಾದ ಬೀದಿಗಳು ಕಾರ್ಮಿಕರ ಕಾರಕೂನರ, ಗೃಹಿಣಿಯರ, ಚಿಳ್ಳೆ ಪಿಳ್ಳೆಗಳ, ವಾಹನಗಳ ತುಳಿತಕ್ಕೆ ಸಿಕ್ಕಿವೆ. ಧೂಳಿನಲ್ಲಿ ಹೇರಳ ಬ್ಯಾಕ್ಟೀರಿಯಗಳು ತುಂಬಿವೆ.

ಇದೇ ನಗರದ ಹೊಂಡದ ಬೀದಿಯಲ್ಲಿ ಪೋಲಾಳ್ವ ಇಂಟರ್ ನ್ಯಾಷನಲ್ ಸ್ಟುಡಿಯೋಸ್ ಎಂಬ ಬೋರ್ಡು ತಲೆಯೆತ್ತಿದೆ.

ಬಣವೇ ಕಲ್ಲಿನ ವಿದ್ಯಾರ್ಥಿ ತಂಡವು ಪ್ರಿನ್ಸಿಪಾಲರ ನೇತೃತ್ವದಲ್ಲಿ ವಿಶ್ವ ವಿದ್ಯಾಲಯದ ಹಾಸ್ಟೆಲೊಂದರಲ್ಲಿ ಬಂದಿಳಿಯಿತು. ವಿದ್ಯಾರ್ಥಿನಿಯರನ್ನು ಬೇರೊಂದು ಹಾಸ್ಟೆಲಿನಲ್ಲಿಳಿಸಿದ್ದರು.

ಮರುದಿವಸ ಸಂಜೆ ವಿಶ್ವವಿದ್ಯಾನಿಲಯ ಮಟ್ಟದ ಸ್ಪರ್ಧೆಗಳು ನಡೆಯಲಿದ್ದವು. ನಾಟಕ, ಕೋಲಾಟ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಫಿಲಿಂ ಹಿಟ್ಸ್ ಮೊದಲಾದ ಅನೇಕ ಕಲೆಗಳಲ್ಲಿ ಹಲವು ಕಾಲೇಜುಗಳ ಸ್ಪರ್ಧಾಳುಗಳ ಸೆಣಸಾಟ ಯಾರಿಗೆ ತಾನೇ ಕುತೂಹಲ ತರುದಿರುವುದಿಲ್ಲ ?

ಮಂದಾರ ಮಧ್ಯಾಹ್ನದ ಊಟ ಮುಗಿಸಿ, ತನ್ನ ತಂಡದ ಇತರರೊಡನೆ ಸೇರಿಕೊಂಡಳು. ರಾಜೀವನ ನೇತೃತ್ವದಲ್ಲಿ ಎಲ್ಲರೂ ಅಭ್ಯಾಸದಲ್ಲಿ ನಿರತರಾದರು. ಹ್ಯಾಂಲೆಟ್ ಕಂಠ ದಿನ ದಿನಕ್ಕೂ ಹೆಚ್ಚು ಮಧುರವಾಗತೊಡಗಿತ್ತು. ಒಂದು ಪಕ್ಷ ಮಂದಾರ ಹೆಚ್ಚು ಯತ್ನಿಸದಿದ್ದರೂ ಅವರ ಜೋಡಿಗೆ ವಿಶ್ವವಿದ್ಯಾನಿಲಯದ ಪ್ರಶಸ್ತಿ ದೊರಕವುದು ಖಂಡಿತ ಎಂಬ ಅಭಿಪ್ರಾಯ ಬಂಡ್ಲೇರಗಟ್ಟ, ಸಿಡಿಗಲ್ಲು, ಕಣಕುಪ್ಪೆ, ಬಡವನಕೋಟೆ, ಕಳ್ಳರಳ್ಳಿ ಮೊದಲಾದ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಮೂಡಿತು.

ಮಧ್ಯಾಹ್ನ ನಾಲ್ಕರ ಸುಮಾರು, ಕಿಂಗ್ ಲಿಯರ್‌ನು ಕಾರ್ ಒಂದರಲ್ಲಿ ಹಾಸ್ಟೆಲಿಗೆ ಬಂದ. ಪ್ರಿನ್ಸಿಪಾಲರನ್ನು ಕಂಡು ಮಂದಾರನನ್ನು ಕರೆದುಕೊಂಡು ನಗರದತ್ತ ಹೊರಟ.

ಐದು ಗಂಟೆಯ ವೇಳೆಗೆ ಮಂದಾರ, ಕಿಂಗ್‌ಲಿಯರ್, ಒಥೆಲೋ ಮೂವರೂ,

ಸ್ಟೋಲಾಳ್ವ ಸ್ಟುಡಿಯೋಸ್ ಬೀದಿಯಲ್ಲಿರುವ ಹೋಟೆಲ್ ಪೈಜಿಂಕ್ಸ್‌ನ ಮೂರನೆ ಮಹಡಿಯ 22ನೇ ರೂಮಿನಲ್ಲಿ ಕುಳಿತಿದ್ದರು. ಐದು ಗಂಟೆ ಐದು ನಿಮಿಷಕ್ಕೆ ಸರಿಯಾಗಿ ಪಕ್ಕದ ಕೋಣೆಗೆ ಕರೆ ಬಂತು.

ಇಪ್ಪತ್ತಮೂರನೇ ಕೋಣೆಯಲ್ಲಿ ಒಂದು ಮಂಚದ ಮೇಲೆ ಇಬ್ಬರು ಕುಳಿತಿದ್ದರು. ಮೇಜಿನ ಮೇಲೆ ಒಂದು ವ್ಹಿಸ್ಕಿ ಸೀಸೆ. ಕಾರಹಚ್ಚಿದ ಗೋಡಂಬಿಯ ಪೊಟ್ಟಣ. ಸೀಸೆ ಅರ್ಧ ಖಾಲಿಯಾಗಿತ್ತು. ಕುಳಿತವನೊಬ್ಬನು ಎದ್ದು ನಿಂತು ಒಥೆಲೋನ ಕೈಕುಲುಕಿದ. ಮಂದಾರನ ಕಡೆ ತಿರುಗಿ ಕತ್ತನ್ನು ಕೊಂಕಿಸಿ ಬಾಯಿ ಬಿಟ್ಟು ಹೇಳಿದ.

" ಅಣ್ಣಾವ್ರೇ, ಇವ್ರಿಗೆ ಗ್ಯಾರಂಟಿ ಛಾನ್ಸ್. ಇವೊತ್ತೊಂದು ಸ್ಕ್ರೀನ್ ಟೆಸ್ಟ್, ಸುಮ್ನೆ ರುಟೀನ್. ಫೆಂಟಾಸ್ಟಿಕ್. ಕತೆ ಎಲ್ಲಾ ರೆಡಿ. ಇವರಿಗೇ ಹುಡುಕುತ್ತಿದ್ದೆ ನಾನು. ಒಂದು ಪೆಗ್? "

ಶಿವು "ಥ್ಯಾಂಕ್ಸ್, ನಾನು ರೆಡಿ. ಆದರೆ ಇವರಿಬ್ಬರೂ ತುಂಬಾ ಆರ್ಥಡಾಕ್ಸ್." ಎಂದ ಅವನು "ಹಾಗೇ ಇವರ ಧ್ವನೀನೂ ಇವೊತ್ತೇ ರೆಕಾರ್ಡ್ ಮಾಡಿಸಿಬಿಡೋಣ. ನಾಳೆ ಇವರು ಪ್ರೈಜ್ ಗಿಟ್ಟಿಸಿದರೆ, ಪಬ್ಲಿಸಿಟೀನೂ ಬೇಕಾದಷ್ಟು ಸಿಗ್ತದೆ" ಎಂದ.

ಪಕ್ಕದಲ್ಲಿದ್ದವನ ಕಿವಿಯಲ್ಲಿ ಏನೋ ಹೇಳಲು ಅವನೆದ್ದು ಫೋನ್ ಮಾಡಿದ.

" ಹಲೋ, ರೆಕಾರ್ಡಿಸ್ಟ್ ತಾನೆ. ರೈಟ್ ರೈಟ್. ಈಗ ಬಂದುಬಿಡ್ತೀವಿ. ಆಂ........ ಹೂಂ........ ಹೂಂ........ ಆಂ........ ಈಗ ಆಗೋದಿಲ್ವೆ........ We have no time .... ಆಂ........ಬಟ್ ಷಿ ಮೇ ಹ್ಯಾವ್ ಟು ಲೀವ್ ಟುಮಾರೋ........ ಏನಾದ್ರೂ ಡೆಫನಿಟ್ ಹೇಳಲೇಬೇಕು........ ಆಂ........ ಏನಂದ್ರೀ........ ನಾಳೆ ಬೆಳಿಗ್ಗೆ ? .... ಇಂಪಾಸಿಬಲ್........ ಪ್ಲೀಸ್........ ನನಗೆ ಬಹಳ ಕೆಲ್ಸ ಇದೆ........ ನಾಳೆ ಬಾಂಬೇಗೆ ಹೋಗಬೇಕು........ ಆಲ್‌ರೈಟ್ .... ಟು ನೈಟ್ at Ten........ ok."

"ಫೋನನ್ನು ಕುಕ್ಕಿ ಅವನು ಒಥೆಲೋಗೆ ಹೇಳಿದ " ಇವೊತ್ತು ರಾತ್ರಿ ಹತ್ತು ಗಂಟೆಗೆ ಬಹಳ ಕಷ್ಟ ಪಟ್ಟು ಎಂಗೇಜ್‌ಮೆಂಟ್ ತೆಗೆದು ಕೊಂಡಿದ್ದೇನೆ. ಇದು ಬರೀ ರುಟೀನ್ ಅಷ್ಟೆ ಷಿ ವಿಲ್ ಡೆಫನಿಟ್ಲೀ ಗೆಟ್ ಎ ಛಾನ್ಸ್. ಇದು ನಾನು ಮಾಡಿದ ಗ್ರೇಟೆಸ್ಟ್ ಡಿಸ್ಕವರಿ........ ವೆಲ್........".

ಕಿಂಗ್‌ಲಿಯರ್ "ಗ್ರೇಟ್" ಎಂದು ತೃಪ್ತನಾದ. ಮಂದಾರ ಮುಖ ಕಿವುಚಿ

ಕೊಂಡಳು. ಒಥೆಲೋ ಖುಷಿಯಾಗಿ ಬಿಟ್ಟ. ಕಾರನ್ನು ನಡೆಸಿಕೊಂಡು ಮಂದಾರ ನನ್ನು ಹಾಸ್ಟೆಲಿಗೆ ಕರೆದೊಯ್ಯುವಾಗ ಕಿಂಗ್‌ಲಿಯರ್ ಒಥೆಲೋ ಜೊತೆಗೆ ಹೋಗ ಲಿಲ್ಲ.

ರಾತ್ರಿ ಹತ್ತು ಗಂಟೆ. ರಾಜೀವ ಏಕಪಾತ್ರಾಭಿನಯದ ಅಭ್ಯಾಸವಲ್ಲಿದ್ದ, ಹ್ಯಾಂಲೆಟ್ ಕಾಮುಪಲಾಸ್ ರಾಗದ ಆಲಾಪನೆಯಲ್ಲಿ ತೊಡಗಿದ್ದ.

ಪ್ರಿನ್ಸಿಪಾಲ್ ವೆಂಕಟಪ್ಪನವರು ರಾಜೀವನನ್ನು ಕರೆದುಕೊಂಡು ವಿದ್ಯಾರ್ಥಿನಿ ಯರಿದ್ದ ಹಾಸ್ಟೆಲಿನ ಕಡೆಗೆ ಹೊರಟರು. ಅವರು ತಮ್ಮ ಬಾಲ್ಯ ಮಿತ್ರನೊಬ್ಬನನ್ನು ನೋಡಲು ಪೋಲಾಳ್ವ ನಗರಕ್ಕೆ ಹೋಗಬೇಕಿತ್ತು. ವಿದ್ಯಾರ್ಥಿಗಳೆಲ್ಲರೂ ಇದ್ದಾರೆ ಯೇ ಎನ್ನುವುದನ್ನು ನೋಡಿ ನಿಶ್ಚಿಂತೆಯಿಂದ ತಮ್ಮ ಮಿತ್ರನ ಮನೆ ತಲುಪಿದರೆ ಒಳ್ಳೆಯದಲ್ಲವೇ ? ವಿದ್ಯಾರ್ಥಿಗಳ ಚಿಂತೆ ಅವರಿಗಿಲ್ಲ. ವಿದ್ಯಾರ್ಥಿನಿಯರೂ, ಅವರದೇ ಅವರಿಗೆ ದೊಡ್ಡ ತಲೆನೋವು. ವಿದ್ಯಾರ್ಥಿನಿಯರ ನಾಯಕಿ ವಸಂತ ನಂಬಿಕೆಗೆ ಅರ್ಹಳು. ಆದರೆ ಮಂದಾರ? ಅವಳಲ್ಲಿ ಅವರಿಗೆ ನಂಬಿಕೆ ಸಾಲದು.

ಹತ್ತು ನಿಮಿಷ ನಡೆದ ಮೇಲೆ ಅವರು ವಿದ್ಯಾರ್ಥಿನಿಯರ ಬಿಡಾರವನ್ನು ತಲುಪಿದರು. ರಾಜೀವನನ್ನು ಒಳಕ್ಕೆ ಕಳಿಸಿ ವೆಂಕಟಪ್ಪನವರು ಹೊರಗೇ ನಿಂತರು. ಕಾವಲುಗಾರ, ವಾರ್ಡನ್ ಮೊದಲಾದವರನ್ನು ಕಂಡರೆ ತಮ್ಮ ಘನತೆಗೇ ಕೇಡು.

ರಾಜೀವನಿಗೆ ಏನೂ ಕಷ್ಟವಾಗಲಿಲ್ಲ. ವಿದ್ಯಾರ್ಥಿ ಮೇಳದ ಸಡಗರದಲ್ಲಿ ಬರುವವರೆಷ್ಟೋ ಹೋಗುವವರೆಷ್ಟೋ. ರಾಜೀವ ಕೋಣೆಯ ಕದ ತಟ್ಟಿದಾಗ ಕದ ತೆರೆದವಳು ವಸಂತ. ಅವಳ ಮುಖ ಗಂಭೀರವಾಗಿತ್ತು.

" ರಾಜೀವ್, ಏನಿದು, ಏಕೆ ಬಂದೆ? "

" ಗುಡ್‌ನೈಟ್ ಟು ಯು ವಸಂತ. ನಾನೀಗ ಪ್ರಿನ್ಸಿಪಾಲರ ಪರವಾಗಿ ಬಂದಿ ದ್ದೇನೆ. ಪ್ರೇಮದಿಂದ ಅಲ್ಲ. ಎಲ್ಲರೂ ಇದ್ದಾರೋ ? "

" ಇಲ್ಲ ರಾಜೀವ್. ಮಂದಾರ ಯಾರಿಗೂ ತಿಳಿಸದೆ, ಎಲ್ಲಿಗೆ ಎಂದು ಸುಳಿವು ಕೊಡದೆ, ಯಾವುದೋ ಕಾರಿನಲ್ಲಿ ರಾತ್ರಿ ಎಂಟೂವರೆ ಗಂಟೆಗೆ ಹೊರಗೆ ಹೋದಳು. ನನಗೂ ಹೇಳಲಿಲ್ಲ. ಇನ್ನೂ ಬಂದಿಲ್ಲ, ಎಷ್ಟು ಹೊತ್ತಿಗೆ ಬರುತ್ತೇನೆ ಎಂಬುದನ್ನೂ ಹೇಳಿಲ್ಲ " ಎಂದಳು.

ರಾಜೀವನ ಎದೆ ಝಲ್ ಎಂದಿತು. ಅವನು ಬಂದು ಪ್ರಿನ್ಸಿಪಾಲರಿಗೆ ವಿಷ ಯವನ್ನು ತಿಳಿಸಿದ. ಅವರು ಹಣೆ ಹಣೆ ಚಚ್ಚಿಕೊಂಡರು.

(ಸಶೇಷ)

ಪರ್ಸಪ್ಪ ಜಿ. ಎನ್. ಜಿ. ದೀಕ್ಷಿತ್.

ಪರ್ಸಪ್ಪ ಬಿ. ಎಸ್ಸಿ. ಬಿ. ಎಡ್. ಅಂತೂ ಮುಗಿಸಿಕೊಂಡು ಮನೆಗೆ ಬಂದಿದ್ದ. ಇನ್ನು ಕೆಲಸದ ಬೇಟೆ ಅವನಿಗೆ ಕೆಲಸ ಸಿಗುವುದು ಪಾವಗಡದ ತೋಳನ್ನು ಹುಡುಕುವಷ್ಟು ಕಷ್ಟವೇನು ಆಗಿರಲಿಲ್ಲ ಕಾರಣ ಅವರಪ್ಪ ರಾಯಪ್ಪ ಪ್ರಭಾವಶಾಲಿ. ಮಗನನ್ನು ಕರೆದು.

" ತಮಾ, ನಮ್ಮ ಬಸ್ಸೆಟ್ಟೆಪ್ಪನ ಸಾಲ್ಯಾಗೆ ಕೆಲ್ಸ ಐತೇನು ? – ಇಚಾರ್ಸು– ನೀ ಈಗಿಂದೀಗೇ ಓಗಿ ಬಸ್ಸೆಟ್ಟೆಪ್ಪನಿಗೆ ನಾ ಕಳ್ಸೀನೀ ಅಂತೇಳು " ಎಂದ.

ಪರ್ಸಪ್ಪನ ಸವಾರಿ ಪೇಟೆಗೆ ಹೊರಟಿತು. ಬಸ್ಸೆಟ್ಟೆಪ್ಪನವರ ದಳ್ಳಾಳಿ ಅಂಗಡಿಗೆ ಪರ್ಸಪ್ಪನ ಪ್ರವೇಶ ಆದಾಗ ಬಸ್ಸೆಟ್ಟೆಪ್ಪನವರು ಫೋನು ಮಾಡುತ್ತಿದ್ದರು.

"........ ಅಲೋ, ಅಲೋ........ ಬ್ಯಾಳೀರೇಟು ಹೆಂಗೈತಿ........ಆ........ ಊಂ ....ಎರಡು ಲೋಡು ಏರ್ಸ್ಸಿ...ಅಲೋ! ....ಎಣ್ಣೀ ಮ್ಯಾಕೆ ಒಂಟತಿ.... ಸ್ಟಾಕ್ ಮಾಡಾಕೆ ಏಳು ... ಎಣ್ಣೀ ನಮ್ಹಾಕೆ....ಗೋಡಾನ್‌ನಾಗೆ ಐತಿ.... ಆಂ.... ನಮ್ಹಾಕೆ....ಸ್ಟಾಕು ಇಲ್ಲಾ....ಅನ್ನು....ಮೆತ್ತಗೆ . ಮಾತಾಡಲೇ .... ಮಂತ್ರಿಗೋಳು... ಸಿಕ್ಕಿದ್ರಾ... ಕೆಲಸ... ಆತಾ.... ರೇಟು....ಒಂದಿಸಿದಿಯಾ....ಐವತಕ್ಕೆss ? ಊಂ....ನಾ ಇಲ್ಲಿ ಅರವತ್ತು ಅಂತೀನಿ... ಗ್ಯಾರಂಟಿ ಮಾಡ್ಕಂಡು ಫೋನು ಅಚ್ಚು"

ಬಸ್ಸೆಟ್ಟೆಪ್ಪನವರು ಫೋನು ಕುಕ್ಕಿ ತಲೆ ಎತ್ತಿ ಪರ್ಸಪ್ಪನ್ನು ನೋಡಿ

"ತಮಾ ಕುಂತ್ಗಾ ...ಅಪ್ಪ ಎಂಗೈತಿ....ಏ....ತಮಾ....ಯಾರಲೇ,....ಅಲ್ಲಿ.... ಕಾಫೀಗೇಳಲೇ "

ಅಷ್ಟರಲ್ಲೇ ಫೋನು ರಿಂಗ್ ಆಯಿತು.

"ಅಲೋ....ನಾನು .. ಬಸ್ಸೆಟ್ಟೆಪ್ಪ....ಯಾರು....ಊಂ....ನಿಮ್ಮ ಕೆಲ್ಸಕ್ಕೆ.... ಮುದ್ದಾಂ....ನನ್ನ ಮಗನ್ನೇ ಕಳಿಸಿದ್ದೆ....ಬೆಂಗಳೂರಿಗೆ....ಈಗ ಫೋನು....ಮಾಡಿದ್ದ ಮಂತ್ರಿಗೇಳು ಸಿಕ್ಕಿದ್ದರಂತೆ ನಿಮ್ಮ ಕೆಲ್ಸ ...ಭಾಳಾಕಸ್ಟ ಅಂದ ನನ್ನ ಮಗ.... ಒಂದೂ....ಒಂದೂವರಿ ಲಕ್ಷಕ್ಕದಾರಂತೆ... ಜನ....ಏನ್ಮಾಡಾಕೆ ಆಕ್ಕೈತಿ... ಕಾಲ.... ಭಾಳಾ ಕೆಟ್ಟೋತಿ....ಎಲಕ್ಷನ್ನಾಗೆ ದುಡ್ಯಾಕೆ ನಾವು....ಸೀಟು....ಆಂಧ್ರ ಆಫ್ರಿಕಾ.... ಸಿಲೋನು ...ಮೂರು ಲಕ್ಷ .. ನಾಕು ಲಕ್ಷ ಅಂತಾರೆ....ನೀಯತ್ತು ಇಲ್ಲ ನನ್ನ ಮಗ ಪಟ್ಟು ಇಡ್ದು ...ಮಾಡ್‌ಕೊಡಾಕೇ ಬೇಕೂ ಅಂತ ಅಲ್ಲೇ ಕುಂತ್‌ದಾನೆ.... ನಿಮ್ಮ ಕೆಲಸ ...ಇಲ್ಲಾಂದ್ರ....ಆಕ್ಕೈತಾ....ಅದೆಂಗಾಕ್ಕೈತಿ....ಒಂದು ಲಕ್ಷಕ್ಕೆ

ಕಮ್ಮಿ ಇಲ್ಲಾ ಅಂದ್ರಂತೆ ಇವನು ಐವತಕ್ಕೆ ಬಿಟ್ಟು ಸರೀವಲ್ಲs....ಊಂ....ಕಡೀಗೆ ಎಪ್ಪತ್ತೈದಕ್ಕೆ ಒಂದ್ನಿ ಫೋನು ಮಾಡಿದ....ಭಾಳಾ ಆತಾ....ನಿಮ್ಗೇನು... ಒಂದು.... ಸರ್ಕಾರಿ ಕಂಟ್ರ್ಯಾಟ್‌ನಾಗೆ....ಆಕ್ಕೇತಿ....ಚಕ್ಕು ಬ್ಯಾಡಾ....ಇಂಥಾ ಯವಾರೆಲ್ಲಾ ಕ್ಯಾಸೇ....ನಾಳೆ ಬರ್ರಿ....ಕ್ಯಾಸು ತಗಂಡೇ ಬರ್ರಿ........ಕೆಲಸ ಆದಂಗೇs .... ಖಾಯಮ್ಮೇ...."

ಬಸ್ಸೆಟ್ಟಪ್ಪನವರು ಬಹಿರ್ಮುಖರಾದರು. ಕಾಫಿ ಬಂದಿತ್ತು ಪರ್ಸಪ್ಪನಿಗೆ

" ತಮಾ ಕಾಫಿ ತಗಾs....ಯಾಕ್ ಬಂದದಿ ? "

" ಮಾವಾ ಅಪ್ಪ ಕಳಿಸೇತಿ....ಇಸ್ವ ಬಂದೂಸ್ಕೂಲ್‌ನಾಗೆ ನಂಗೆ....ಕೆಲಸ "

"ನಮ್ಮದು....ಭಾಳಾ....ಸ್ಟ್ರಿಕ್ಟು....ತಮಾ....ನಿಂಗೆ ಬೆಡ್ ಐತಾ....ಬೆಡ್ ಇದ್ರೆ ಅಲ್ಲಿ ಕೆಲಸ "

ಪರ್ಸಪ್ಪ ಕಕ್ಕಾಬಿಕ್ಕಿ ಆದ. ಬಸ್ಸೆಟ್ಟಪ್ಪನವರು ವಿಶ್ವ ಬಂಧು ಸ್ಕೂಲಿನ ಚೇರ್‌ಮನ್ನರು. ಅವರದು ಸ್ಟ್ಯಾಂಡರ್ಡ್ ಸ್ಕೂಲು. ಅಲ್ಲಿ....ಅವರ ಮಾತಿನಲ್ಲಿ ಹೇಳುವುದಾದರೆ 'ಬೆಡ್' ಇದ್ದವರನ್ನೇ ತೆಗೆದುಕೊಳ್ಳುವುದು.

"ತಮಾ ನಿಂಗೆ ಟ್ರೇನಿಂಗ್ ಆಗೇತೋ ಇಲ್ಲೋ ಅಂತನಾ ಕೇಳಿದ್ದು "

"ಆಗೇತಿ ಮಾವ"

"ನಿಂದ್ರು ಅಂಗಾರೆ...."

ಬಸ್ಸೆಟ್ಟಪ್ಪನವರು ಅವರಸ್ಕೂಲಿಗೆ ರಿಂಗ್ ಮಾಡಿದರು

"ಅಲೋ!....ನಾನು ಚೇರ್‌ಮನ್ ಬಸ್ಸೆಟ್ಟಪ್ಪ....ರೀ ಎಡ್‌ಮೇಸ್ಟರೇ.... ಏ ಸೊತ್ರೀ....ಫೋನು ಎತ್ತಾದು? ....ಆಂ .. ಕ್ಲಾಸಿಗೆ ಓಗಿದ್ರಾ....ಬರಾದ್ರಾಗೆ ಒತ್ತಾತs....ನಾಳಿಂದ ...ನಾ ಫೋನು ಮಾಡ್ದಾಗ .. ಸೀಟಿನಾಗೆ ಇರ್ಬೇಕು.... ಕ್ಲಾಸು .. ಗೀಸು ...ಅನ್ನ ಬಾರ್ದು....ರಿಂಗ್ ಆದಾಗ....ಅಲ್ಲಿರ್ಬೇಕು....ನಮಗೇನು ಬ್ಯಾರೇ ಕೆಲಸ ಇಲ್ಲ?....ನಿವೆತ್ತೋತಂಕಾ?....ಇಂಗೇ ಇಡಿದಿರಾನ ಫೋನ್ನ?.... ಇರಿs ...ಇಲ್ಲಿ ಕೇಳ್ರೀ....ನಮ್ಮ ಉಡಗನ್ನ ಕಳಸ್ತಾ ಅದೀನಿ....ಇಂಟ್ರೂ ಮಾಡ್ದಂಗೆ ಮಾಡಿ .. ಕೆಲ್ಸಕ್ಕೆ ತಗೆಳ್ರೀ... ಏನೊ .. ಕೆಲ್ಸ ಐತೀ ಅಂದಿದ್ರಲ್ರೀ .. ಬರ್ತಾನೆ.... ಏಳ್‌ದಸ್ಟು ಕೇಳ್ರೀ....ರೂಲ್ಸು ನನ್ಮುಂದೆ ಓದುಬ್ಯಾಡ್ರೀ....ತಗಬಕು ಅಂದ್ರೆ ತಗಬಕು....ಮುಂದಿಂದು....ನಾ ನೋಡ್ಕತನಿ "

ಫೋನು ಕುಕ್ಕಿ ಪರ್ಸಪ್ಪನಿಗೆ ಹೇಳಿದರು. "ತಮಾ....ನೀ ಸಾಲೀತಾಕೆ ಓಗು.... ಕೆಲಸ ಆಕ್ಕೇತಿ "

ಪರ್ಸಪ್ಪ ಸ್ಕೂಲಿಗೆ ಬಂದ. ಹೆಡ್‌ಮಾಸ್ಟರು ಹೇಳಿದರು "ನೋಡ್ರಿ....ಇದು ಬಿ. ಸಿ. ಟಿ, ವೇಕೆನ್ಸಿ....ನೀ ಏನು ? ಬಿ ಸಿ ಟಿ ನೋ....ಬಿ ಸಿ ನೋ....ಎಸ್ ಜಿ ನೋ "

ಓದಿನಲ್ಲಿ ಇಲ್ಲದಿದ್ದರೂ ಇಂಥಾ ವಿಷಯದಲ್ಲಿ ಪರ್ಸಪ್ಪ ಪರಿಣಿತ. "ಅಲ್ಲಾ ...ಅದೆಂತಾ ವೇಕೆನ್ಸಿ....ಏಳ್ರಿ....ಸರ್ಟಿಫಿಕೇಟು ತರ್ತೀನಿ"

ಹೆಡ್‌ಮಾಸ್ಟರು ಪೆಚ್ಚು ಪೆಚ್ಚಾಗಿ ನಕ್ಕರು. ಅವರದು ಕಣ್ಣು ಕಟ್ಟಿದ ಕುದುರೆ ಅಭ್ಯಾಸ. ಸೀದಾ ಎಲ್ಲೂ ನಿಲ್ಲದೇ ತೊಂಚ....ವಂಚ ಮಾಡದೇ ಓದಿದ್ದು. ಅದಕ್ಕೇನೇ ಮೇಸ್ಟರು ಆದದ್ದು. ಇಲ್ಲದೇ ಇದ್ದಿದ್ದರೆ ...ಅವರೂ ಎಡಗೈ ಹೆಬ್ಬಟ್ಟಾಗಿದ್ದರೆ....ದಳ್ಳಾಳಿ ಅಂಗಡಿ ಇಟ್ಟು....ಸ್ಕೂಲು ಕಮಿಟಿ ಚೇರ್‌ಮನ್ ಏಕೆ?.... ಮೆಡಿಕಲ್ ಕಾಲೇಜ್ ಕಮಿಟಿ ಚೇರ್‌ಮನ್ ಆಗಿ....ಬೆಂಜ್ ಕಾರಿನಲ್ಲಿ ಕಾಲೇಜು ದುಡ್ಡಿನಲ್ಲಿ ಎಣ್ಣೆ ಹಾಕಿಸಿ ಓಡಾಡಿ....ಪರ್ಸಪ್ಪನಂಥವರನ್ನು ಪ್ರಿನ್ಸಿಪಾಲ್ ಮಾಡುತ್ತಿದ್ದರು.

ಅಂತೂ ಪರ್ಸಪ್ಪ ಮೇಸ್ಟರು ಆದ. ವಿಶ್ವ ಬಂಧು ಸ್ಕೂಲಿನ ನಸೀಬು.... ಅಲ್ಲ -- ಅಲ್ಲಿ ಕಲಿಯುವ ಮಕ್ಕಳ ನಸೀಬು.

❋ ❋ ❋

ಮಂತ್ರಿತನವೆಷ್ಟು ಸೊಗಸೆನ್ನುತಿರುವರು ಕೆಲರು
ಸೊಗವು ಎಮ್ಮೆಲ್ಲೆ ಗಿರಿಯೊಳಗೆಂದು ಕೆಲರು
ಎಲ್ಲವನು ಪಾಳ್ಗೆಡಹು ಹಣವ ನೂರ್ಮಡಿಗಳಿಸು
ಮೊಳಗುತಿದೆ ಕೇಳ್ ಚುನಾವಣೆಯು ಬಿರುಸು

ಖುದ್ದೂಸ್.

ವೋಲ್ಟೈರ್ ತನ್ನ ಕೊನೆಯ ದಿನಗಳಲ್ಲಿ ತೋಟದ ವ್ಯವಸಾಯ ಮಾಡುತ್ತಿದ್ದ. ಆಗ ಆತನಲ್ಲಿಗೆ ಬಂದವರೊಬ್ಬರು ಒಬ್ಬಾತನ ಪರಿಚಯ ಹೇಳಿದರಂತೆ. ಅದಕ್ಕೆ ವೋಲ್ಟೈರ್ "ಆತನೊಬ್ಬ ಮಹಾನ್ ಕವಿ, ಪ್ರಕೃತಿಪ್ರಿಯ, ತತ್ವ ಶಾಸ್ತ್ರಜ್ಞ, ಹೆಚ್ಚು ಕಡಿಮೆ ಸಂಪೂರ್ಣ ಜ್ಞಾನಿ" ಎಂದಾಗ

"ಆತನು ತಮ್ಮ ಬಗ್ಗೆ ಇಂತಹ ಗೌರವ ಇಟ್ಟು ಕೊಂಡಂತೆ ಕಾಣುವುದಿಲ್ಲವಲ್ಲ!" ಎಂದನು ಬಂದಾತ.

ಆಹಾ! ಎಂದನಂತೆ ವೋಲ್ಟೈರ್ "Perhaps we are both mistaken".

"................ ಒಬ್ಬಳೇ ಮಡದಿ ಎನಗೆ"

—ಕವಿತೆಯೊಂದರ ಸಾಲು

ಹಿರಾಕ್ಲಿಟೋಸ್" (ಕ್ರಿ. ಪೂ. 540–475) ವಿಶ್ವ ತುಮುಲ (flux) ವಾದಿ. "ನೀವು ಒಂದೇ ನೀರಿನಲ್ಲಿ ಎರಡು ಸಲ ಕಾಲಿಡುವುದಿಲ್ಲ" ಎಂದ.

ಬದಲಾವಣೆ ಇಷ್ಟು ಸಮಗ್ರವಾಗಿದ್ದರೆ ನೀವು ಹಣ ಪಡೆದ ಮನುಷ್ಯ ಅವನೇ ಆಗಿರುವುದಿಲ್ಲ. ಆದ್ದರಿಂದ ಅವನಿಗೆ ಸಾಲ ವಾಪಸು ಮಾಡುವ ಕಾರಣವಿಲ್ಲ ಎಂದನಂತೆ ಒಬ್ಬ

"ಯಾರಿಂದ ಸಾಲ ಪಡೆದೆಯೋ ಅವನಾಗಲೆ ಬದಲಾಗಿದ್ದಾನೆ"


"ನಂದಮೂರಿ ತಾರಕ ರಾಮರಾವ್ ಅವರ ಪದಚ್ಯುತಿ".

"ಪಾರ್ಟಿ ಸ್ಪ್ಲಿಟ್ ನಿಜವಾದರಾ ಗ್ರೇಟಾರ್ಟು ಸ್ಪ್ಲಿಟ್ಟೇ"

"ಸ್ವರ್ಣ ಮಂದಿರ ಒಡೆದವರು ನಾವಲ್ಲ."

ಏಕೆಂದರೆ ಶಿವಧನಸ್ಸು ಮುರಿದವರೂ...........

No. 23 AL/84-NT III



ಶುಭಾಶಯಗಳೊಂದಿಗೆ :-

ಸ್ಕೈಲಾರ್ಕ್ ಆ್ಯನ್ಸಿಲರೀಸ್ ಕಾರ್ಪೊರೇಷನ್

ಎ-188, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,
ಬೆಂಗಳೂರು-560 058.

ಮುದ್ರಕರು : ಶ್ರೀ ವೆಂಕಟೇಶ್ವರ ಪವರ್ ಪ್ರಿಂಟರ್ಸ್ ಪ್ರೈ. ಲಿ.,
ಪೀಣ್ಯ, ಬೆಂಗಳೂರು-58